ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಇಂಡಿಯನ್ ಪ್ರೀಮಿಯರ್ ಲೀಗ್ 2026ರಲ್ಲಿ ಆರ್‌ಸಿಬಿ ತಂಡವನ್ನು ಚಾಂಪಿಯನ್ ಮಾಡಿದ್ದ ನಾಯಕ ರಜತ್ ಪಾಟಿದಾರ್ ಅವರು, ಮಧ್ಯಪ್ರದೇಶ ಲೀಗ್ (ಎಂಪಿಎಲ್) ಟಿ-20ಯಲ್ಲಿ ಜೆಕೆಸಿ ಸ್ಪೋರ್ಟ್ಸ್ ಒಡೆತನದ ಗ್ವಾಲಿಯರ್ ಚೀತಾಸ್ ತಂಡವನ್ನು ಮುನ್ನಡೆಸಲಿದ್ದಾರೆ.

03 ಜೂನ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 84 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ನೋಡುವ ದೃಷ್ಟಿ ಹೇಗಿರಬೇಕು ? » 2


ಮತದಾರರ ಪಟ್ಟಿಯಿಂದ ಯಾರೂ ವಂಚಿತರಾಗಬಾರದು » 3


ಜೂನ್ 5 ರಂದು ರಾಜ್ಯಕ್ಕೆ ಮುಂಗಾರು ಪ್ರವೇಶ » 4

# ಇಂದು ಡಿ.ಕೆ.ಶಿವಕುಮಾರ್ ಪ್ರಮಾಣ ವಚನ

## ಹೊಸ ಸಂಪುಟ ರಚನೆಗೆ ವರಿಷ್ಠರೊಂದಿಗೆ ಡಿ.ಕೆ.ಶಿ-ಸಿದ್ದರಾಮಯ್ಯ ಚರ್ಚೆ: ಅಂತಿಮಪಟ್ಟಿ ಸಿದ್ಧ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಸಂಜೆ ಸಂಜೆ 4.05 ಗಂಟೆಗೆ ಲೋಕಭವನದ ಆವರಣದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಹೊಸ ಸಚಿವ ಸಂಪುಟದ ರಚನೆ ಅಂತಿಮಗೊಳಿಸಲು ಕಾಂಗ್ರೆಸ್ ವರಿಷ್ಠರೊಂದಿಗೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಮಂಗಳವಾರ ಚರ್ಚೆ ನಡೆಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಮತ್ತು ಕರ್ನಾಟಕದ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರೊಂದಿಗೆ ಚರ್ಚೆ ನಡೆಸಿ ಅಂತಿಮಪಟ್ಟಿ ಸಿದ್ಧಪಡಿಸಿದ್ದಾರೆ.

ಹೊಸ ಸಚಿವ ಸಂಪುಟದಲ್ಲಿ ಅನುಭವಿ ನಾಯಕರು ಮತ್ತು ಹೊಸ ಮುಖಗಳ ಮಿಶ್ರಣವಿದ್ದು, ಜಾತಿ ಪ್ರಾತಿನಿಧ್ಯ, ಪ್ರಾದೇಶಿಕ ಸಮತೋಲನ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಡಿ.ಕೆ.ಶಿವಕುಮಾರ್ ಅವರ ಜೊತೆ 14 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎನ್ನಲಾಗಿದೆ.

ಕರ್ನಾಟಕ ಸಚಿವ ಸಂಪುಟದ ಬಲವು ಮುಖ್ಯಮಂತ್ರಿ ಸೇರಿ 34ಕ್ಕೆ ಸೀಮಿತವಾಗಿದೆ. ಹೈಕಮಾಂಡ್‌ನ ಹೊಸ ಲೆಕ್ಕಾಚಾರದ ಪ್ರಕಾರ, 40 ವರ್ಷದೊಳಗಿನ ಯುವ ಶಾಸಕರಿಗೆ ಸಂಪುಟದಲ್ಲಿ 10 ಸ್ಥಾನಗಳನ್ನು ಮೀಸಲಿಡಲು ನಿರ್ಧರಿಸಲಾಗಿದೆ. ಇನ್ನು 50 ರಿಂದ 70 ವರ್ಷದೊಳಗಿನ ಹಿರಿಯ ಮತ್ತು ಅನುಭವಿ ಶಾಸಕರಿಗೆ 20 ಸ್ಥಾನಗಳನ್ನು ನೀಡಲು ವರಿಷ್ಠರು ಮುಂದಾಗಿದ್ದಾರೆ. ಈ ಸೂತ್ರದಿಂದಾಗಿ ಸಚಿವ ಸ್ಥಾನ ಗಿಟ್ಟಿಸಿಕೊಳ್ಳಲು ಅನೇಕ ಮಧ್ಯ ವಯಸ್ಕ ಹಾಗು ಹಿರಿಯ ಆಕಾಂಕ್ಷಿಗಳಲ್ಲಿ ಆತಂಕ ಶುರುವಾಗಿದೆ.



**ಡಿಸಿಎಂ ಸ್ಥಾನಕ್ಕೂ ಪೈಪೋಟಿ**

ಸಚಿವ ಸ್ಥಾನದ ಜೊತೆಗೆ ಉಪ ಮುಖ್ಯಮಂತ್ರಿ ಸ್ಥಾನಕ್ಕೂ ಪೈಪೋಟಿ ನಡೆಯುತ್ತಿದೆ. ಡಿಸಿಎಂ ರೇಸ್‌ನಲ್ಲಿ ಪ್ರಿಯಾಂಕ್ ಖರ್ಗೆ, ಯತೀಂದ್ರ ಸಿದ್ದರಾಮಯ್ಯ, ಎಂ.ಬಿ.ಪಾಟೀಲ್, ಜಮೀರ್ ಅಹ್ಮದ್ ಖಾನ್ ಮುಂಚೂಣಿಯಲ್ಲಿದ್ದಾರೆ. ಯು.ಟಿ.ಖಾದರ್, ಬಿ.ಕೆ.ಹರಿಪ್ರಸಾದ್ ಅವರ ಹೆಸರು ಕೇಳಿ ಬರುತ್ತಿದೆ.

ಲಿಂಗಾಯತ ಮತ್ತು ಅಲ್ಪಸಂಖ್ಯಾರಿಗೆ ಅವಕಾಶ ನೀಡಬೇಕೆಂಬ ಬೇಡಿಕೆ ಇದೆ. ಲಿಂಗಾಯತ ಸಮುದಾಯದಿಂದ ಎಂ.ಬಿ.ಪಾಟೀಲ್ ಹೆಸರು ಮುಂಚೂಣಿಯಲ್ಲಿದ್ದರೆ, ಅಲ್ಪಸಂಖ್ಯಾತ ಸಮುದಾಯದಿಂದ ಜಮೀರ್ ಅಹ್ಮದ್ ಖಾನ್ ಅಥವಾ ಯು.ಟಿ.ಖಾದರ್ ಹೆಸರು ಕೇಳಿ ಬರುತ್ತಿದೆ. ಹೀಗಾಗಿ ಹೈಕಮಾಂಡ್ ಏನು ನಿರ್ಧಾರ ಕೈಗೊಳ್ಳಲಿದೆ ಎಂಬುವುದು ಇನ್ನೂ ಅಂತಿಮಗೊಂಡಿಲ್ಲ.

### ಸಾಂಭವ್ಯ ಸಚಿವರ ಪಟ್ಟಿ

ಪ್ರಿಯಾಂಕ್ ಖರ್ಗೆ, ಯತೀಂದ್ರ ಸಿದ್ದರಾಮಯ್ಯ, ಯು.ಟಿ.ಖಾದರ್, ಕೆ.ಹೆಚ್.ಮುನಿಯಪ್ಪ, ಎಂ.ಬಿ.ಪಾಟೀಲ್, ಡಾ.ಜಿ.ಪರಮೇಶ್ವರ್, ಕೆ.ಜೆ.ಜಾರ್ಜ್, ರಾಮಲಿಂಗ ರೆಡ್ಡಿ, ಕೃಷ್ಣ ಬೈರೇಗೌಡ, ಬಿ.ಕೆ.ಹರಿಪ್ರಸಾದ್, ಚಲುವರಾಯಸ್ವಾಮಿ, ಬೈರತಿ ಸುರೇಶ್ ಅವರಿಗೆ ಮೊದಲ ಪಟ್ಟಿಯಲ್ಲಿ ಅವಕಾಶ ಸಿಗಲಿದೆ ಎನ್ನಲಾಗಿದೆ. ಸತೀಶ್ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವ ಸಾಧ್ಯತೆ ಇರುವುದರಿಂದ ಸಚಿವರ ಪಟ್ಟಿಯಲ್ಲಿ ಅವರ ಹೆಸರು ಇಲ್ಲ ಎನ್ನಲಾಗುತ್ತಿದೆ. ಹೊಸ ಸರ್ಕಾರದಲ್ಲಿ ಹೆಚ್ಚಿನ ಸಂಖ್ಯೆಯ ಉಪ ಮುಖ್ಯಮಂತ್ರಿಗಳು ಇರಬಹುದೆಂಬ ಊಹಾಪೋಹವೂ ಇದೆ. ಆದರೆ, ಯಾವುದೇ ಖಚಿತ ಮಾಹಿತಿ ಲಭ್ಯವಾಗಿಲ್ಲ.

**ಗಾಂಧಿ ಕುಟುಂಬಕ್ಕೆ ಡಿ.ಕೆ.ಶಿ. ಧನ್ಯವಾದ**

ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪದಗ್ರಹಣಕ್ಕೂ ಮೊದಲು ಗಾಂಧಿ ಕುಟುಂಬಕ್ಕೆ ಧನ್ಯವಾದ ಅರ್ಪಿಸಿದ್ದಾರೆ. ತಮ್ಮ ರಾಜಕೀಯ ಪ್ರಯಾಣದಲ್ಲಿ ಗಾಂಧಿ ಕುಟುಂಬದ ಪಾತ್ರ ಮತ್ತು ಜೀವನದ ವಿವಿಧ ಹಂತಗಳಲ್ಲಿ ಅವರು ತಮ್ಮ ಮೇಲೆ ಇಟ್ಟಿದ್ದ ನಂಬಿಕೆಯನ್ನು ಸ್ಮರಿಸಿದ್ದಾರೆ.

ರಾಜ್ಯದ ಜನರ ಆಶೀರ್ವಾದದೊಂದಿಗೆ, ಮೌಲ್ಯಯುತ, ಪ್ರಗತಿಪರ ನಿಲುವು ಹೊಂದಿರುವ, ಎಲ್ಲರನ್ನೂ ಒಳಗೊಂಡ ಮತ್ತು ಸಮೃದ್ಧ ಕರ್ನಾಟಕವನ್ನು ನಿರ್ಮಿಸಲು ಪ್ರಾಮಾಣಿಕತೆ ಮತ್ತು ಬದ್ಧತೆಯೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇನೆ.

ಗಾಂಧಿ ಕುಟುಂಬ ನನ್ನ ರಾಜಕೀಯ ಪ್ರಯಾಣದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ, ಕೇವಲ ನಾಯಕತ್ವದ ಮೂಲಕವಲ್ಲ. ಆದರೆ, ನನ್ನ ಜೀವನದ ವಿವಿಧ ಹಂತಗಳಲ್ಲಿ ಅವರು ನನ್ನ ಮೇಲೆ ಇಟ್ಟಿರುವ ನಂಬಿಕೆಯ ಮೂಲಕ ನಿರ್ಣಾಯಕ ಪಾತ್ರ ವಹಿಸಿದೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

# ಶಿವಕುಮಾರ್ ಪದಗ್ರಹಣ: ಜಿಲ್ಲಾ ಕಾಂಗ್ರೆಸ್‌ನಲ್ಲಿ ಉತ್ಸಾಹ

## ರಾರಾಜಿಸುತ್ತಿರುವ ಅಭಿನಂದನೆ ಸಲ್ಲಿಸುವ ಫ್ಲೆಕ್ಸ್, ಬ್ಯಾನರ್‌ಗಳು | ಸಂಭ್ರಮಾಚರಣೆಗೆ ಅಭಿಮಾನಿಗಳು ಸಜ್ಜು

• ಪ್ರಜೋದಯ ವರದಿ

**ಹಾಸನ :** ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಬುಧವಾರ ಅಧಿಕಾರ ಸ್ವೀಕರಿಸುತ್ತಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಜಿಲ್ಲೆಯ ರಾಜಕೀಯ ಲೆಕ್ಕಾಚಾರಗಳಿಗೂ ಹೊಸ ತಿರುವು ಸಿಗುವ ನಿರೀಕ್ಷೆ ವ್ಯಕ್ತವಾಗಿದೆ.

ಜಿಲ್ಲೆಯ ವಿವಿಧೆಡೆ ಮುಖ್ಯಮಂತ್ರಿ ಸ್ಥಾನಕ್ಕೇರುವ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸುವ ಫ್ಲೆಕ್ಸ್-ಬ್ಯಾನರ್‌ಗಳು ರಾರಾಜಿಸುತ್ತಿವೆ. ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿಕೆ, ಪಟಾಕಿ ಸಿಡಿಸುವ ಮೂಲಕ ಸಂಭ್ರಮಾಚರಣೆಗೆ ಸಜ್ಜಾಗಿದ್ದಾರೆ. ನಗರದ ಕಾಂಗ್ರೆಸ್ ಕಚೇರಿಯಲ್ಲಿ ಪ್ರಮಾಣ ವಚನ ಸಮಾರಂಭದ ನೇರ ಪ್ರಸಾರ ವೀಕ್ಷಣೆಗೆ ವಿಶೇಷ ವ್ಯವಸ್ಥೆ ಮಾಡಲಾಗಿದೆ.



**ಆಪ್ತರ ರಾಜಕೀಯ ಚಟುವಟಿಕೆಗೆ ವೇಗ**


2023ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯಲ್ಲಿ ಡಿ.ಕೆ.ಶಿವಕುಮಾರ್ ಅವರ ಪ್ರಭಾವ ಸ್ಪಷ್ಟವಾಗಿ ಗೋಚರಿಸಿತ್ತು. ಹಾಸನ ಕ್ಷೇತ್ರದ ಬನವಾಸೆ ರಂಗಸ್ವಾಮಿ, ಆಲೂರು-ಸಕಲೇಶಪುರ ಕ್ಷೇತ್ರದ ಮುರಳಿಮೋಹನ್, ಬೇಲೂರಿನ ಬಿ. ಶಿವರಾಮ್ ಹಾಗು ಅರಕಲಗೂಡು ಕ್ಷೇತ್ರದ ಶ್ರೀಧರ್‌ಗೌಡ, ಚನ್ನರಾಯಪಟ್ಟಣದ ಎಂ.ಎ.ಗೋಪಾಲಸ್ವಾಮಿ ಅವರು ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಾಗಿ ಗುರುತಿಸಿ ಕೊಂಡಿದ್ದರು. ಶಾಸಕ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಅವರು ಸಿದ್ದರಾಮಯ್ಯ, ಡಿ.ಕೆ.ಶಿವ ಕುಮಾರ್ ಅವರೊಂದಿಗೆ ಆತ್ಮೀಯ ಸಂಬಂಧ ಬೆಸೆದುಕೊಂಡು ಬಂದಿದ್ದಾರೆ.

### ಜಿಲ್ಲೆಗೆ ಸಚಿವ ಸ್ಥಾನ ನಿರೀಕ್ಷೆ-ಕುತೂಹಲ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಭದ್ರಕೋಟೆಯಾಗಿರುವ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿರುವ ಏಕೈಕ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಈ ಬಾರಿ ಸಚಿವ ಸ್ಥಾನ ಸಿಗಲಿದೆಯೇ ಎಂಬ ಕುತೂಹಲ ತೀವ್ರಗೊಂಡಿದೆ.

ಕಳೆದ ಮೂರು ವರ್ಷಗಳಿಂದ ಸಚಿವ ಸ್ಥಾನದ ನಿರೀಕ್ಷೆಯಲ್ಲಿರುವ ಕೆ.ಎಂ. ಶಿವಲಿಂಗೇಗೌಡ ಅವರಿಗೆ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎನ್ನಲಾಗುತ್ತಿದೆ. ಆದರೆ, ಮೊದಲ ಪಟ್ಟಿಯಲ್ಲಿ ಅವರಿಗೆ ಅವಕಾಶ ಸಿಗಲಾರದು.

ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಸತತವಾಗಿ ನಾಲ್ಕು ಬಾರಿ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಅಭಿವೃದ್ಧಿ ಕಾರ್ಯಗಳು ಹಾಗು ಅಧಿವೇಶನದಲ್ಲಿ ಶಿವಲಿಂಗೇಗೌಡ ಅವರು ಚರ್ಚೆ ನಡೆಸುವ ಮಾತಿನ ದಾಟಿಯಿಂದ ರಾಜ್ಯದ ಜನರ ಗಮನ ಸೆಳೆಯುತ್ತಾ ಬಂದಿದ್ದಾರೆ.



**ಬೀಳಲಿದೆಯೇ ಬಣ ರಾಜಕೀಯಕ್ಕೆ ಬ್ರೇಕ್**

ಜಿಲ್ಲಾ ಕಾಂಗ್ರೆಸ್ ಹಲವು ವರ್ಷಗಳಿಂದ ಬಣ ರಾಜಕೀಯದ ಕಾರಣಕ್ಕೆ ಸುದ್ದಿಯಾಗುತ್ತಲೇ ಇದೆ. ನಾಯಕರ ನಡುವಿನ ಭಿನ್ನಾಭಿಪ್ರಾಯಗಳು ಪಕ್ಷದ ಸಂಘಟನೆ ಮೇಲೂ ಪರಿಣಾಮ ಬೀರಿದ್ದವು. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿರುವ ಹಿನ್ನಲೆ ವಿವಿಧ ಬಣಗಳ ನಡುವೆ ಸಮನ್ವಯ ಮೂಡುವ ಸಾಧ್ಯತೆ ಇದೆ ಎಂಬ ನಿರೀಕ್ಷೆ ಕಾಂಗ್ರೆಸ್ ವಲಯದಲ್ಲಿ ಮೂಡಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಸಂಘಟನೆಯನ್ನು ಪುನಶ್ಚೇತನಗೊಳಿಸುವ ಅಗತ್ಯವಿದೆ. ಹೊಸ ನಾಯಕತ್ವದ ಅಡಿಯಲ್ಲಿ ಜಿಲ್ಲಾ ಕಾಂಗ್ರೆಸ್ ಮತ್ತೊಮ್ಮೆ ಸಂಘಟಿತ ಶಕ್ತಿಯಾಗಿ ಹೊರಹೊಮ್ಮಬಹುದೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

# ದೇವರ ಮೊರೆ ಹೋದ ಶಿವಲಿಂಗೇಗೌಡ ಬೆಂಬಲಿಗರು

## ಅರಸೀಕೆರೆ ತಾಲ್ಲೂಕಿನ ಹಲವೆಡೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಅರಸೀಕೆರೆ :** ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ದೊರೆಯಲೆಂದು ಪ್ರಾರ್ಥಿಸಿ ಕಾಂಗ್ರೆಸ್ ಕಾರ್ಯಕರ್ತರು ಹಾಗು ಅಭಿಮಾನಿಗಳು ನಗರದ ವಿಘ್ನೇಶ್ವರ ಸ್ವಾಮಿ ದೇವಸ್ಥಾನದಲ್ಲಿ 101 ಈಡುಗಾಯಿ ಸಮರ್ಪಿಸುವ ಮೂಲಕ ವಿಶೇಷ ಪೂಜೆ ಸಲ್ಲಿಸಿದರು.

ಪೂಜೆಯ ಬಳಿಕ ಮಾತನಾಡಿದ ಮುಖಂಡ ಸುಬ್ರಹ್ಮಣ್ಯ ಬಾಬು ಅವರು, ಶಾಸಕ ಶಿವಲಿಂಗೇಗೌಡ ಅವರು ಸಚಿವರಾಗಬೇಕೆಂದು ಕ್ಷೇತ್ರದಾದ್ಯಂತ ವಿವಿಧ ದೇವಾಲಯಗಳಲ್ಲಿ ಪೂಜೆಗಳು ನಡೆಯುತ್ತಿವೆ. ವಿಘ್ನೇಶ್ವರ ಸ್ವಾಮಿಗೆ 101 ಈಡುಗಾಯಿ ಅರ್ಪಿಸುವ ಮೂಲಕ ಸಚಿವ ಸ್ಥಾನಕ್ಕೆ ಇರುವ ಎಲ್ಲಾ ಅಡೆತಡೆಗಳು ನಿವಾರಣೆಯಾಗಲಿ ಎಂದು ಪ್ರಾರ್ಥಿಸಲಾಗಿದೆ ಎಂದರು.



ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಗಂಜಿಗೆರೆ ಚಂದ್ರಶೇಖರ್ ಮಾತನಾಡಿ, ಶಾಸಕ ಶಿವಲಿಂಗೇಗೌಡ ಹಾಗು ವಿಘ್ನೇಶ್ವರ ಸ್ವಾಮಿ ದೇವಸ್ಥಾನಕ್ಕೂ ಭಾವನಾತ್ಮಕ ಸಂಬಂಧವಿದೆ. ನಾಲ್ಕು ಬಾರಿ ಶಾಸಕರಾಗಿ ಗೆಲುವು ಸಾಧಿಸಿರುವ ಅವರ ರಾಜಕೀಯ ಪಯಣಕ್ಕೆ ದೇವರ ಕೃಪೆಯೂ ಕಾರಣವಾಗಿದೆ. ಹೀಗಾಗಿ ಇಲ್ಲಿ ಪೂಜೆ ಸಲ್ಲಿಸಿದ್ದೇವೆಂದು ಹೇಳಿದರು.

ಇದೇ ವೇಳೆ ತಾಲ್ಲೂಕಿನ ಗಂಡಸಿ ಹೋಬಳಿಯ ಚಗಚಗೆರೆ ಗ್ರಾಮದಲ್ಲಿ ಶ್ರೀ ಮಲ್ಲೇಶ್ವರ ಸ್ವಾಮಿ, ಬೀರಲಿಂಗೇಶ್ವರ ಸ್ವಾಮಿ, ಮೈಲಾಲಿಂಗೇಶ್ವರ ಸ್ವಾಮಿ ಹಾಗು ಆಂಜನೇಯ ಸ್ವಾಮಿ ದೇವಾಲಯಗಳಲ್ಲಿ ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸಿ ಈಡುಗಾಯಿ ಅರ್ಪಿಸಿದರು. ಕಣಕಟ್ಟೆ ಹೋಬಳಿಯ ಕಾಮಸಮುದ್ರ ಗ್ರಾಮದಲ್ಲಿಯೂ ವಿಶೇಷ ಪೂಜೆ ಮತ್ತು ಈಡುಗಾಯಿ ಸಮರ್ಪಣೆ ಮೂಲಕ ಕೆ.ಎಂ. ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ದೊರೆಯಲೆಂದು ಪ್ರಾರ್ಥಿಸಲಾಯಿತು. ಮುಖಂಡರಾದ ಕೃಷ್ಣ, ಬಾಲಮುರುಗನ್, ಮಹಮ್ಮದ್ ಗೌಸ್, ದಲಿತ ಸಂಘಟನೆ ಮುಖಂಡ ವೆಂಕಟೇಶ್, ಬಂಡಿಹಳ್ಳಿ ಗಿರೀಶ್, ಉಮಾಶಂಕರ್, ವೈ.ಕೆ.ದೇವರಾಜು, ಕರವೇ ಕಿರಣ್ ಕುಮಾರ್, ಹೇಮಂತಕುಮಾರ್, ಕೆಜೆಪಿ ಮಂಜು, ಸಾಖಿ ಮಂಜು, ಎ.ಪಿ. ಚಂದ್ರಯ್ಯ, ರೈತ ಮುಖಂಡ ಬೋರನಕೊಪ್ಪಲು ಶಿವಮೂರ್ತಪ್ಪ, ತಿರುಪತಿಹಳ್ಳಿ ಕೃಷ್ಣನಾಯ್ಕ ಸೇರಿ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

### ಯು.ಟಿ. ಖಾದರ್‌ಗೆ ಸಚಿವ ಸ್ಥಾನ ಸಾಧ್ಯತೆ

• ಪ್ರಜೋದಯ ವರದಿ

**ಬೆಂಗಳೂರು:** ಸ್ಪೀಕರ್ ಯು.ಟಿ. ಖಾದರ್ ಅವರು ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದ ಹೊಸ ಸಚಿವ ಸಂಪುಟಕ್ಕೆ ಸೇರ್ಪಡೆ ಗೊಳ್ಳುವ ಸಾಧ್ಯತೆ ಇದೆ ಎಂಬ ಊಹಾಪೋಹಗಳಿಗೆ ಕಾರಣವಾಗಿದೆ.



ರಾಜ್ಯ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ನಿಯೋಜಿತ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೂನ್ 3 ರಂದು ಸಂಜೆ 4.05ಕ್ಕೆ ಲೋಕ ಭವನದ ಆವರಣದಲ್ಲಿ ತಮ್ಮ ಸಚಿವ ಸಂಪುಟದ ಸದಸ್ಯರೊಂದಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರೊಂದಿಗೆ ಯುಟಿ ಖಾದರ್ ಅವರು ಸಹ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ.

### ಕಾವ್ಯಗೆ ಪಿಹೆಚ್‌ಡಿ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕಟ್ಟಾಯ ಹೋಬಳಿಯ ಕಲ್ಲಹಳ್ಳಿ ಗ್ರಾಮದ ಶಿಕ್ಷಕ ಹೆಚ್. ಮೋಹನ್ ಕುಮಾರ್ ಹಾಗು ಶಿಕ್ಷಕಿ ಎನ್.ಆರ್.ಸುಜಾತ ಅವರ ಪುತ್ರಿ ಕೆ.ಎಂ.ಕಾವ್ಯ ಅವರು ಪಿಹೆಚ್.ಡಿ ಪದವಿ ಪಡೆದಿದ್ದಾರೆ.

ಕಾವ್ಯ ಅವರು ಮೈಸೂರು ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರೊ.ಎಸ್.ಕೃಷ್ಣವೇಣಿ ಅವರ ಮಾರ್ಗದರ್ಶನದಲ್ಲಿ ಪ್ರೊಟೀನ್‌ಗಳ ರಚನಾ ವಿನ್ಯಾಸ ಮತ್ತು ರೂಪಾಂತರಗಳ ಅಧ್ಯಯನ ಕುರಿತು ಮಂಡಿಸಿದ ಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ದೊರೆತಿದೆ.










C M Y K C M Y K C M Y K C M Y K



# ನೋಡುವ ದೃಷ್ಟಿ ಹೇಗಿರಬೇಕು?

ದೃಷ್ಟಿಯಂತೆ ಸೃಷ್ಟಿ ಎನ್ನುತ್ತೇವೆ. ನೋಡುವ ದೃಷ್ಟಿ ಒಳ್ಳೆಯದಿದ್ದರೆ, ಜಗತ್ತು ಒಳ್ಳೆಯದಾಗಿ ಕಾಣುತ್ತದೆ. ಹಾಗಾಗಿ ನೋಡುವ ದೃಷ್ಟಿ ಮಹತ್ವದ್ದು. ಜಗತ್ತನ್ನು ಸ್ವರ್ಗವನ್ನಾಗಿಯೂ ನೋಡಬಹುದು. ನರಕವನ್ನಾಗಿಯೂ ನೋಡಬಹುದು. ಇದು ಅತ್ಯಂತ ಪವಿತ್ರ, ದಿವ್ಯ ಅಂತ ನೋಡಬಹುದು. ಇದು ಅತ್ಯಂತ ಜಡ ಅಂತ ನೋಡಬಹುದು. ದೃಷ್ಟಿ ಬಹಳ ಮಹತ್ವ. ಜೀವನದ ಸೊಬಗು, ಸಾರ್ಥಕತೆ ಈ ದೃಷ್ಟಿಯ ಮೇಲೆ ಅವಲಂಬಿಸಿದೆ. ದೃಷ್ಟಿ ಬದಲಾಯಿತು, ಜಗತ್ತು ಬದಲಾಗುತ್ತದೆ. ದೃಷ್ಟಿ ಸ್ಥಿರವಾಯಿತು, ಜಗತ್ತು ಸ್ಥಿರವಾಗುತ್ತದೆ. ದೃಷ್ಟಿ ದಿವ್ಯವಾಯಿತು ಅಂದರೆ ಜಗತ್ತೆಲ್ಲ ಭವ್ಯ, ದಿವ್ಯವಾಗುತ್ತದೆ.

ಉದಾಹರಣೆ: ನೀರು. ನೀರನ್ನು ಇದೇನು ಸಾಮಾನ್ಯ ನೀರು ಅಂತ ನೋಡಬಹುದು. ಇದು ಬಹಳ ಪವಿತ್ರ. ಇದೇ ಜೀವನ ಅಂತ ನೋಡಬಹುದು. ನೀರ ಬಿಟ್ಟರೆ ಜೀವನವಿಲ್ಲ. ದೇಹದಲ್ಲಿ ಶೇಕಡ 75 ಭಾಗ ನೀರೇ ಇದೆ. ಇಂತಹ ನೀರನ್ನು ಅದ್ಭುತ ಅಂತ ನೋಡಲು ಬರುವುದಿಲ್ಲವೇನು? ನೀವು. ಇದೇನು ನೀರು ಅಂತ ಗಟಾರದ ಕಡೆ ನೋಡಲಿಕ್ಕೂ ಬರುತ್ತದೆ. ನಮ್ಮ ದೃಷ್ಟಿಯನ್ನು ನಾವೇ ರೂಪಿಸಿಕೊಳ್ಳಬೇಕು. ಬದುಕು ಸಾರ್ಥಕವಾಗುವಂತೆ ದೃಷ್ಟಿಯನ್ನು ರೂಪಿಸಿಕೊಳ್ಳಬೇಕು. ನನ್ನನ್ನು ನಾನು ನೋಡುವಾಗ, ನಿಮ್ಮತ್ತ ನೀವು ನೋಡುವಾಗ ಯಾವ ದೃಷ್ಟಿಯಿಂದ ನೋಡುತ್ತೀವಿ. ನಾನು ಪಾಪಿ ಅಂತ ನೋಡೋದಿಕ್ಕೆ ಬರುತ್ತದೆ. ನಾನು ಶ್ರೇಷ್ಠ ಅಂತ ನೋಡೋದಕ್ಕೂ ಬರುತ್ತದೆ. ಎರಡೂ ಸಾಧ್ಯ ಅದು ನಮ್ಮ ಮೇಲೆ ಅವಲಂಬಿಸಿಕೊಂಡಿದೆ.

ಒಬ್ಬ ಸಂತ ಜಗತ್ತನ್ನು ದೇವನೆಂದು ನೋಡಿದ. ಮತ್ತೆ ದೇವನಿಲ್ಲ, ಈ ಜಗತ್ತೇ ದೇವರು ಎಂದು ನೋಡಿದ. ಕಾಣುವ ಪ್ರತಿಯೊಂದು ವಸ್ತು ದೇವನ ಒಂದೊಂದು ರೂಪ ಎಂದು ನೋಡಿದ. ಹೀನವಾಗಿ, ಕೆಟ್ಟದಾಗಿ ನೋಡಿದರೆ ಬದುಕೆಲ್ಲ ಹೊಲಸಾಗುತ್ತದೆ. ದಿವ್ಯವಾಗಿ ನೋಡಿದರೆ ಬದುಕು ಪವಿತ್ರವಾಗುತ್ತದೆ. ಬದುಕು ಪವಿತ್ರ ಮಾಡುವ ವಿಧಾನ ನೋಡುವ ದೃಷ್ಟಿ.

ಮೈಕೆಲ್ ಎಂಜೆಲೋ ಜಗತ್ಪ್ರಸಿದ್ಧ ಶಿಲ್ಪಿ. (ಚಿತ್ರ ನೋಡಿ) ಇಟಲಿ ದೇಶವನ್ನು ಶ್ರೀಮಂತ, ಸುಂದರ ಮಾಡಿದವನು ಈತನೇ. ಆತನ ಕಲಾಕೃತಿಯಿಂದ ಇಟಲಿ ದೇಶ ಇಂದೂ ಬದುಕುತಿದೆ. ಮೈಕೆಲ್ ಎಂಜೆಲೋ ಮೂರ್ತಿ ನೋಡಲು ಜಗತ್ತಿನ ಜನ ಬರುತ್ತಿತ್ತು. ಅಷ್ಟು ಆಕರ್ಷಕ. ಕಲ್ಲು ಕಲ್ಲಿನಲ್ಲಿ ಜೀವ ತುಂಬಿದನು. ಜಗತ್ತೆಲ್ಲ ನನ್ನ ಮೂರ್ತಿ ನೋಡುತ್ತದೆ. ಆದರೆ ನಾನು ನೋಡುವುದು ಬೇರೆ. ಜಗತ್ತೇ ದೇವನ ಮೂರ್ತಿ ಅಂತ ಭಾವಿಸಿದ್ದೇನೆ. ಇವೆಲ್ಲ ನನಗೆ ಮಾದರಿಗಳು. ನಾನು ಅದನ್ನು ಅನುಕರಿಸುತ್ತಿದ್ದೇನೆ. ನಾನೇನು ಹೊಸದೇನು ಮಾಡಿಲ್ಲ. ನಿಸರ್ಗ ನಕಲು ಮಾಡಿದ್ದೇನೆ. ನಿಸರ್ಗದಂತೆ ಮಾಡೋದಕ್ಕೆ ನನಗೆ ಬರುವುದಿಲ್ಲ. ಒಂದು ಹೂ ಅರಳುತ್ತದೆ, ಬಾಡುತ್ತಿದೆ. ಮನುಷ್ಯ ಬರೆದ ಚಿತ್ರ ಅರಳಿದೆಯೇನು?. ಬಾಡಿದೆ ಏನು?. ಅದು ಬರೀ ಚಿತ್ರ. ನಿಸರ್ಗದ್ದು ಸಜೀವ ಚಿತ್ರ. ಮನುಷ್ಯ ಬರೀ ಚಿತ್ರ ಬಿಡಿಸಬಲ್ಲ. ದೇವ ಸಜೀವ ಚಿತ್ರ ನಿರ್ಮಿಸುತ್ತಾನೆ. ಯಾರು ಜಗತ್ತನ್ನು ರೂಪಿಸುತ್ತಾನೋ ಆ ಶಿಲ್ಪಿಯೇ ದೇವರೆಂದು ಹೇಳಿದವ ಮೈಕೆಲ್ ಎಂಜೆಲೋ. ನಮ್ಮ ನಮ್ಮ ದೇಹದ ಕಡೆ ನೋಡಿ. ಎಂತಹ ಬಣ್ಣ ಕೊಟ್ಟಿದ್ದಾನೆ?. ಎಂತೆಂತಹ ಕ್ರಿಯೆ ನಡೆಯುತ್ತಿದೆ? ಅದ್ಭುತ. ದೇವನ ಕಲಾಕೃತಿ ನೋಡಲು ಖರ್ಚು ಮಾಡೋದಲ್ಲ. ಕಣ್ಣು ತೆರೆದರೆ ಸಾಕು. ನೀನು ವ್ಯಾಪಾರಿ ಅಂತ ನೋಡಬೇಡ. ರೈತ ಅಂತ ನೋಡಬೇಡ. ನೀನೊಬ್ಬ ಅಧ್ಯಾಪಕ ಅಂತ ನೋಡಬೇಡ. ನೀನು ದೇವನ ಕಲಾಕೃತಿ ಅಂತ ನೋಡು. ಇದೊಂದು ಕಲೆ. ದೇವ ನಿರ್ಮಿಸಿದ ರೂಪ ನಾನು. ಬಡವ ಅಂತ ನೋಡಿದರೆ ಬಡವ. ನಾನು ಶ್ರೀಮಂತ ಅಂತ ನೋಡಿದರೆ ಶ್ರೀಮಂತ. ನಾನು ಯಾವುದಕ್ಕೂ ಬಾರದವ ಅಂತ ನೋಡಿದರೆ ನಾನು ಯಾವುದಕ್ಕೂ ಬಾರದವ. ನನಗೆ ಯಾವುದೇ ಬಣ್ಣವಿರಲಿ, ಎಷ್ಟೇ ಎತ್ತರವಿರಲಿ, ನಾನು ದೇವನ ಕಲೆ ಅಲ್ಲವೇನು?. ದೇವ ಮಾಡಿದ್ದು ಬಹಳ ಪವಿತ್ರ. ಈ ದೃಷ್ಟಿ ಬಂದರೆ ಜಗತ್ತೆಲ್ಲಾ ಬದಲಾಗುತ್ತದೆ. ಜೀವನ ಬದಲಾಗಿ ಹೋಗುತ್ತದೆ. ಆದ್ದರಿಂದ ನಮ್ಮನ್ನು ನಾವು ನೋಡುವುದು ಕಲಿಯಬೇಕು.


ಜನ ನನ್ನನ್ನು ಯಾವ ದೃಷ್ಟಿ ನೋಡುತ್ತಾರೆ ಅನ್ನೋದು ಮಹತ್ವದಲ್ಲ. ನಾನು ನನ್ನನ್ನು ಹೇಗೆ ನೋಡುತ್ತೇನೆ ಅನ್ನೋದು ಮಾತ್ರ ಮಹತ್ವದ್ದು. ನಾನು ನಿಮ್ಮನ್ನು ವೈರಿಯಂತೆ ನೋಡಬಹುದು. ಒಂದು ಮರದಲ್ಲಿ ಒಂದು ಕೋಗಿಲೆ ಇತ್ತು. ಅಲ್ಲಿಗೆ ಗಿಳಿ ಬಂದಿತ್ತು. ಕೋಗಿಲೆ ಬಳಿ ಕುಳಿತು, ಗಿಳಿ ಕೋಗಿಲೆಗೆ ಕೇಳಿತು. ನನ್ನ ಬಗ್ಗೆ ಜಗತ್ತು ಏನನ್ನುತ್ತದೆ ಗೊತ್ತಾ. ಕೋಗಿಲೆ ಇಲ್ಲ ಅಂದಿತು. ಗಿಳಿ ಹೇಳಿತು ನಿನಗೆ ಗೊತ್ತಿಲ್ಲ, ಜನ ನನ್ನ ಎಷ್ಟು ಕೊಂಡಾಡುತ್ತಾರೆ?. ಏನು ನನ್ನ ಮೈಬಣ್ಣ?. ಹಸಿರು. ಕೆಂಪು ಕೊಕ್ಕು. ಮಾತು ಮಧುರ. ನನ್ನನ್ನು ಎಷ್ಟು ಪ್ರೀತಿಸುತ್ತಾರೆ ಎಂದರೆ, ಬಂಗಾರದ ಪಂಜರ ಮಾಡಿಸಿ ಇಡುತ್ತಾರೆ. ಬೆಳ್ಳಿ ಬಟ್ಟಲಿನಲ್ಲಿ ನೀರು ಕೊಡುತ್ತಾರೆ. ಅಪರೂಪದ ಹಣ್ಣುಗಳನ್ನು ಕೊಡುತ್ತಾರೆ. ನಿನಗೆ ನನ್ನ ವೈಭವ ಗೊತ್ತಿಲ್ಲ ಎಂದಿತು ಗಿಳಿ. ಆಗ ಕೋಗಿಲೆ ಸುಮ್ಮನೆ ಕುಳಿತಿತ್ತು. ಮತ್ತೆ ಗಿಳಿ ಕೇಳಿತು. ನಿಮಗೇನು ಅಂತಾರೆ ಗೊತ್ತೇನು. ಆಗ ಕೋಗಿಲೆ ಹೇಳಿತು ಗೊತ್ತು ಮಾಡಿಕೊಳ್ಳುವುದಕ್ಕೆ ನನಗೆಲ್ಲಿ ವೇಳೆ ಇದೆ. ಯಾಕೆ ಅಂದಿತು ಗಿಳಿ. ಕೋಗಿಲೆ ಹೇಳಿತು ಭಗವಂತ ನನ್ನನ್ನು ಕಳುಹಿಸಿದ್ದು ನನ್ನನ್ನು ಹಾಡಲು, ಪಂಜರದಲ್ಲಿ ಸಿಕ್ಕಲು ಅಲ್ಲ. ನಿನ್ನ ಒಳಗೆ ಇಟ್ಟಿದ್ದಾರೆ. ನೀನು ದೇವರ ಕಲಾಕೃತಿ ಅಂತ ಭಾವಿಸಿದ್ದರೆ ಸ್ವತಂತ್ರವಾಗಿ ಇರುತ್ತಿದ್ದೆ. ನನಗೆ ದೇವನೇ ಬಣ್ಣ ಹಚ್ಚಿದ್ದಾನೆ. ಆದ್ದರಿಂದ ದೇವನೇ ಹಚ್ಚಿರುವುದರಿಂದ ಕೆಟ್ಟದ್ದು ಅನ್ನಲಿಕ್ಕೆ ಆಗುವುದಿಲ್ಲ. ಎಲ್ಲರಿಗೂ ಒಂದೇ ತರ ಬಣ್ಣ ಹಚ್ಚಿದ್ದರೆ ಚಂದ ಕಾಣುವುದಿಲ್ಲ ಅಂತ ದೇವರು ಬೇರೆ ಬೇರೆ ಬಣ್ಣ ಬಳಿದಿದ್ದಾನೆ. ಬಾಲ್ಯದಲ್ಲಿ ಒಂದು ಬಣ್ಣ. ಯುವಕರಲ್ಲಿ ಒಂದು ಬಣ್ಣ. ಮುಪ್ಪಿನಲ್ಲಿ ಒಂದು ಬಣ್ಣ ನೀಡಿದ್ದಾನೆ. ಕ್ರಿಯೆಯ ಹಿಂದಿರುವ ಶಕ್ತಿ ದೇವರೆಂದು ನೋಡು. ಯಾವ ಶಕ್ತಿಯಿಂದ ಜಗತ್ತಲ್ಲಿ ಕೆಲಸ ಮಾಡುತ್ತಿದೆ ಅದೇ ದೇವರೆಂದು ನೋಡು. ಅಂತ ಪೂಜ್ಯ ಸಿದ್ದೇಶ್ವರ ಸ್ವಾಮೀಜಿಯವರು ಪ್ರವಚನದಲ್ಲಿ ಹೇಳಿದ್ದು. ಮಕ್ಕಳೇ, ನೋಡುವ ದೃಷ್ಟಿ ಬದಲಾಗಲಿ ಅಲ್ಲವೇ.

**– ಎಂ.ಪಿ. ಜ್ಞಾನೇಶ್**, ಮಂಗಳೂರು

## ತೊಟ್ಟಿಲು

ತೂಗುತ್ತಿದ್ದೇನೆ ಜಗವಾಳುವ ಕೈಯನ್ನ ಮನವಾಳುವ ಮುದ್ದು ಮಗುವನ್ನು. ನಾನು ಈ ಮನೆಯ ಮೊದಲ ಮಗುವನ್ನು ಎತ್ತಾಡಿಸಿದ ನಂತರ ಬದುಕು ನಿಲ್ಲಲಿಲ್ಲ. ನಾನವರಿಗೆ ಮೊದಲ ಆಶ್ರಯವಾಗಿದ್ದೆ ಹಾಗೆ ಮನೆಗಳನ್ನ ದಾಟಿ ದಾಟಿ ಯಾರಿಗೂ ಬೇಡವಾಗಿ ಎಲ್ಲೋ ಒಂದು ಕತ್ತಲೆ ಕೋಣೆಯೊಳಗೆ ಮುಳುಗಿಬಿಟ್ಟಿದೆ. ಎಷ್ಟು ಕೂಗಿ ಕರೆದರೂ ಯಾರಿಗೂ ಕೇಳಿಸುತ್ತಿಲ್ಲ. ನನಗೆ ನನ್ನ ಮನೆ ಸೇರಬೇಕು, ದೈವ ನಿರ್ಣಯವೋ ಏನೋ ಹಾಗಾಗಿ ನಾ ಕತ್ತಲೆಯ ಕೋಣೆಯೊಳಗೆ ಬೆಳಕೊಂದು ಬಂದು ನನ್ನನ್ನು ಹುಡುಕಿ ನನ್ನ ಮೊದಲಿದ್ದ ಮನೆಗೆ ತಂದುಬಿಟ್ಟರು. ನಾನು ಒಂದಷ್ಟು ನನ್ನ ಅಂದ ಚಂದಗಳನ್ನು ಬಣ್ಣ ಬದಲಿಸಿಕೊಂಡು ಈ ಮನೆಯ ನನ್ನ ಮೊದಲ ಮಗುವಿನ ಮಗುವನ್ನು ಎತ್ತಾಡಿಸುವ ಜವಾಬ್ದಾರಿ ನನ್ನದು. ಮತ್ತೆ ಸಂಭ್ರಮ ಖುಷಿಯಿಂದ ತಯಾರಾಗಿದ್ದೇನೆ. ಕಷ್ಟವನ್ನು ಎದುರಿಸುವ ಶಕ್ತಿ ಸಿಗಲಿ ಪ್ರಯತ್ನಿಸಿದರೆ ಎಲ್ಲವೂ ಸಿಗುವಂತಾಗಲಿ ಕಣ್ಣೀರಿಗೂ ಬೆಲೆ ಸಿಗುವಂತಾಗಲಿ, ಅನ್ನೋದು ನನ್ನ ಆಶಯವಷ್ಟೇ ನಾನು ತೊಟ್ಟಿಲಾಗಿ ಎತ್ತಾಡಿಸಿದ್ದೇನೆ ನನ್ನೊಳಗಿನಿಂದ ಎದ್ದು ನಿಂತವರು ಜಗತ್ತನ್ನ ಎತ್ತಾಡಿಸಬೇಕಷ್ಟೆ.

**– ಧೀರಜ್** ಬೆಳ್ಳಾರೆ



### ಮೆಹಂದಿ ಆಗೋಯ್ತು!

ಸಿಡ್ನಿಯಿಂದ ನಮ್ಮಣ್ಣನ ಮೊಮ್ಮಗಳು ಐದು ವರ್ಷದ ಅಂಜಲಿ, ತನ್ನ ಅಪ್ಪ-ಅಮ್ಮನೊಂದಿಗೆ ನಮ್ಮ ಮನೆಯ ಮದುವೆ ಸಮಾರಂಭಕ್ಕೆ ಬಂದಿದ್ದಳು. ಕನ್ನಡದಲ್ಲೇ ಚುರುಕಾಗಿ ಮಾತನಾಡುತ್ತಿದ್ದಳು.

ನನ್ನ ಗೆಳತಿಯೊಬ್ಬಳು ನನ್ನ ಬಳಿ ಮೆಹಂದಿ ಕಾರ್ಯಕ್ರಮ ಯಾವಾಗ? ಎಂದು ಕೇಳಿದಾಗ, ಅಲ್ಲೇ ಇದ್ದ ಅಂಜಲಿ ನಮ್ಮ ಅಮ್ಮನ ಮೆಹಂದಿ ಇವತ್ತು ಆಗೋಯ್ತು ಎಂದಳು. ಎಲ್ಲರೂ ಆಶ್ಚರ್ಯದಿಂದ ನೋಡಲು ನಮ್ಮಮ್ಮ ಇವತ್ತು ತಲೆಗೆ ಮೆಹಂದಿ ಹಚ್ಚಿಕೊಂಡು ಸ್ನಾನ ಮಾಡಿದ್ದಾಯ್ತು! ಎಂದಾಗ, ಅಲ್ಲಿದ್ದವರೆಲ್ಲ ನಕ್ಕರು.

**– ಎನ್‌ಪಿ. ಶೈಲಜ**, ತಿಪಟೂರು

## ಮಯೂರ ಹಾಸ್ಯ

★★★★★★★★★★★★★★★★

### ಗುಂಡನ ಉಳಿತಾಯ ಯೋಜನೆ

ಮಕ್ಕಳೇ ನಿಮಗೆಲ್ಲ ಉಳಿತಾಯ ಯೋಜನೆ ಬಗ್ಗೆ ತಿಳಿಸಿದ್ದೆ. ಅಮ್ಮ, ಅಪ್ಪನಿಗೆ ತೊಂದರೆಯಾಗದಂತೆ ಕಾಸುಕಾಸು ಕೂಡಿಡಬೇಕೆಂದು; ಅದು ಮುಂದೆ ನಿಮಗೇ ಉಪಯೋಗವಾಗು ವುದೆಂದು ತಿಳಿಸಿದ್ದೆ. ಯಾರೆಲ್ಲಾ ಅದನ್ನು ಅನುಸರಿಸುತ್ತಿದ್ದೀರಿ? ಎಂದು ಮೇಡಂ ಕೇಳಿದರು.

ಹೌದು ಮೇಡಂ, ನಾವು, ನೀವು ಹೇಳಿದ ಹಾಗೆ ಅನುಸರಿಸುತ್ತಿದ್ದೇವೆ ಅಂದ್ರು ಮಕ್ಕಳು. ಆದ್ರೆ ಸೈಲೆಂಟಾಗಿದ್ದ ಗುಂಡನನ್ನು ನೀನೇನಂತಿ ದಡ್ಡ ಗುಂಡಾ?

ನಿನಗೆ ಸ್ವಲ್ಪಾನೂ ಬುದ್ಧಿಯಿಲ್ಲ. ಎಲ್ಲದ್ರಲ್ಲೂ ಫೇಲ್ ಆಗ್ತಾ ಇರ್ತೀಯಾ? ಏನಾದ್ರೂ ಉಳಿತಾಯ ಮಾಡೋಕು ಅಂತ ಅಂಡ್ಕೊಂಡಿದೀಯಾ ಹೇಗೆ? ಎಂದು ಮೇಡಂ ಕೇಳಿದರು.

ಇಲ್ಲ, ಮೇಡಂ ಈಗ್ಲೆ ನನ್ನ ತಲೇಲಿರೊ ಬುದ್ಧಿ ಖರ್ಚು ಮಾಡ್ಬಿಟ್ರೆ ಮುಂದೆ ಮುದುಕ ಆದಾಗ ಏನು ಗತಿ? ಅದಕ್ಕೇ ಸ್ವಲ್ಪ ಸ್ವಲ್ಪಾನೇ ಬುದ್ಧಿ ಖರ್ಚು ಮಾಡ್ತೀನಿ ಅಂದಾಗ, ಮೇಡಂ ವಾಹ್... ಗುಂಡಾ ಮೆಚ್ಚಿದೆ ನಿನ್ನ ಬುದ್ಧಿವಂತಿಕೆ ಅಂದ್ರು, ಜೊತೆಗೆ ಮಕ್ಕಳೆಲ್ಲಾ ನಗುವಿನಲ್ಲಿ ಮುಳುಗಿದ್ರು.

**– ಸುಮನಾ**, ಬೆಂಗಳೂರು



# ಯುದ್ಧ ಮತ್ತು ಎಲ್ ನಿನೋ, ಕೃಷಿ ಹೇಗೋ ಏನೋ?!

ನೇಲನೋಟ ತುಳುನಾಡಿನ ಸಾಂಪ್ರದಾಯಿಕ ಪತ್ತನಾಜೆ ಪರ್ವವು ಮುಗಿಯುವುದರೊಂದಿಗೆ ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯದೆಡೆ ಬೇಸಗೆಯ ಧಗೆಯಿಂದ ಪಾರಾಗುವ ಹಾಗೂ ಮುಂಗಾರು ಮಳೆಯ ಆಗಮನವನ್ನು ಸ್ವಾಗತಿಸುವ, ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ನಿರತವಾಗುವ ಸಿದ್ಧತೆಗಳು ಶುರುವಾಗಿವೆ.

ಜೂನ್ ತಿಂಗಳ ಆರಂಭವು ಕೃಷಿಕರಿಗೆ ಬಿತ್ತನೆಯ ಭರವಸೆಯನ್ನು, ತಮ್ಮ ಕೃಷಿ ಭೂಮಿಯಲ್ಲಿ ಈ ವರ್ಷದ ಬೆಳೆಗೆ ಬೇಕಾದ ಕೆಲಸ ಕಾರ್ಯಗಳನ್ನು ಆರಂಭಿಸುವ ಸಮಯ. ಈ ಋತುವಿನ ಮಳೆಗಾಲದ ಕೃಷಿ ಚಟುವಟಿಕೆಗಳು ಜಾಗತಿಕ ಹವಾಮಾನ ವೈಪರೀತ್ಯಗಳು ಹಾಗೂ ಭೌಗೋಳಿಕ-ರಾಜಕೀಯ ಬಿಕ್ಕಟ್ಟುಗಳ ನೆರಳಿನಲ್ಲಿ ನಲುಗುತ್ತಿವೆ. ಅನ್ಯಾನ್ಯ ಸಮಸ್ಯೆಗಳಿಂದ ಹೈರಾಣಾಗಿರುವ ರೈತಾಪಿ ವರ್ಗಕ್ಕೆ ಈ ಋತುಮಾನ ಸತ್ವ ಪರೀಕ್ಷೆಯ ಕಾಲ!

ಹವಾಮಾನ ಇಲಾಖೆಯ ಇತ್ತೀಚಿನ ಕಳವಳಕಾರಿ ಮುನ್ಸೂಚನೆಗಳು, ಪೆಸಿಫಿಕ್ ಸಾಗರದಲ್ಲಿ ಮರುಕಳಿಸುತ್ತಿರುವ ಎಲ್ ನಿನೋ ವಿದ್ಯಮಾನದ ನಕಾರಾತ್ಮಕ ಪರಿಣಾಮ, ಮಧ್ಯ ಪ್ರಾಚ್ಯದ ಪ್ರಕ್ಷುಬ್ಧ ವಾತಾವರಣ ಮತ್ತು ಯುದ್ಧದ ಪರಿಣಾಮವಾಗಿ ಸೃಷ್ಟಿಯಾಗಿರುವ ರಸಗೊಬ್ಬರ ಅಭಾವ – ಈ ಪ್ರಮುಖ ಅಂಶಗಳು ದೇಶದ ಕೃಷಿ ವಲಯದ ಮೇಲೆ ಗಂಭೀರ ಪರಿಣಾಮ ಬೀರಲಿವೆ. ಕೃಷಿಯು ದೇಶದ ಬಹುಪಾಲು ಜನರ ಆದಾಯದ ಮೂಲ ಮತ್ತು ಈ ತೊಂದರೆಗಳು ಕೃಷಿಕರ ಬಳಗಕ್ಕೆ ಬಲವಾದ ಪೆಟ್ಟು ನೀಡಲಿವೆ. ಈ ಬಾರಿಯ ಮುಂಗಾರಿನ ಕುರಿತು ತನ್ನ ಮುನ್ಸೂಚನೆಯನ್ನು ಹವಾಮಾನ ಇಲಾಖೆ ಇತ್ತೀಚೆಗೆ ಪರಿಷ್ಕರಿಸಿದ್ದು, ರೈತರಿಗೆ ಎಚ್ಚರಿಕೆಯ ಸಂದೇಶವನ್ನು ರವಾನಿಸಿದೆ!

2026ರ ಜೂನ್ನಿಂದ ಸೆಪ್ಟೆಂಬರ್‌ವರೆಗಿನ ನೈರುತ್ಯ ಮುಂಗಾರು ಅವಧಿಯಲ್ಲಿ ದೇಶಾದ್ಯಂತ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಗಳು ದಟ್ಟವಾಗಿವೆ. ದೇಶದ ದೀರ್ಘಾವಧಿಯ ಸರಾಸರಿ ಮಳೆಯು ವಾಡಿಕೆಗಿಂತ ಕಡಿಮೆಯಾಗಿ, 90% ಮಾತ್ರ ಸುರಿಯಲಿದೆ ಎಂದು ಅಂದಾಜು.

ಹಿಂದಿನ ವಿಶ್ಲೇಷಣೆ ಪ್ರಕಾರ ಇದು 92% ಇರಲಿದೆ ಎಂದು ನಿರೀಕ್ಷಿಸಲಾಗಿತ್ತು. ಈ ವರ್ಷ ದೇಶದ ಕೆಲವು ಭಾಗಗಳಲ್ಲಿ 60%ದಷ್ಟು ಮಳೆ ಕೊರತೆ ಆಗುವ ಸಾಧ್ಯತೆಗಳಿದ್ದು, ಬರಗಾಲದ ಭೀತಿಯನ್ನು ಹೆಚ್ಚಿಸಿದೆ. ಈಶಾನ್ಯ ಭಾರತದ ಕೆಲವು ಭಾಗಗಳನ್ನು ಹೊರತು ಪಡಿಸಿದರೆ, ದೇಶದ ಬಹುಪಾಲು ಕೃಷಿ ಆಧಾರಿತ ವಲಯಗಳಲ್ಲಿ ಮಳೆಯ ಪ್ರಮಾಣವು 94%ಕ್ಕಿಂತ ಕಡಿಮೆ ಇರಲಿದೆ.

ಕರ್ನಾಟಕದ ಒಳನಾಡು, ಮಲೆನಾಡು ಮತ್ತು ಕರಾವಳಿಯಲ್ಲೂ ವಾಡಿಕೆಗಿಂತ ಕಡಿಮೆ ಮಳೆಯಾಗುವ ಮುನ್ಸೂಚನೆ. ಇದರಿಂದಾಗಿ ಬಿತ್ತನೆ ಕಾರ್ಯಗಳಿಗೆ ಆರಂಭಿಕ ಹಂತದಲ್ಲಿಯೇ ಹಿನ್ನಡೆಯಾಗುವ ಅಪಾಯವಿದೆ. ಈ ಋತುವಿನಲ್ಲಿ ಮಳೆಯ ಪ್ರಮಾಣ ಗಣನೀಯ ಕುಸಿತವಾಗಲು ಪ್ರಮುಖ ಕಾರಣ ಎಲ್ ನಿನೋ ಹವಾಮಾನ ವಿದ್ಯಮಾನ.

ಪೆಸಿಫಿಕ್ ಸಾಗರದ ಮಧ್ಯ ಮತ್ತು ಪೂರ್ವ ಭಾಗದಲ್ಲಿ (ವಿಶೇಷವಾಗಿ ಸಮಭಾಜಕ ವೃತ್ತದ ಬಳಿ) ಸಮುದ್ರದ ಮೇಲ್ಮೈ ಉಷ್ಣಾಂಶವು ವಾಡಿಕೆಗಿಂತ ಹೆಚ್ಚಾಗುವ ಪ್ರಕ್ರಿಯೆಗೆ ಎಲ್ ನಿನೋ ಎನ್ನುತ್ತಾರೆ. ಉಷ್ಣಾಂಶದ ಏರಿಕೆಯು ಜಾಗತಿಕ ವಾಯುಭಾರ ಮತ್ತು ಮಾರುತಗಳ ದಿಕ್ಕನ್ನು ಬದಲಾಯಿಸುತ್ತದೆ.

ವಿವಿಧ ಹವಾಮಾನ ವರದಿಗಳ ಪ್ರಕಾರ, 2026ರ ಮೇ ತಿಂಗಳಿನಿಂದ ಜುಲೈವರೆಗಿನ ಅವಧಿಯಲ್ಲಿ ಎಲ್ ನಿನೋ ಮರುಕಳಿಸುವ ಸಾಧ್ಯತೆ 82%ದಷ್ಟಿದೆ. ಇದು ಚಳಿಗಾಲದವರೆಗೂ ಅಂದರೆ 2026ರ ಅಂತ್ಯದವರೆಗೂ ಮುಂದುವರಿಯುವ ಅಂದಾಜಿದೆ.

ಎಲ್ ನಿನೋ ಸಕ್ರಿಯವಾದಾಗ, ಹಿಂದೂ ಮಹಾಸಾಗರದಿಂದ ಭಾರತದ ಉಪಖಂಡದತ್ತ ಬೀಸಬೇಕಾದ ತೇವಾಂಶಭರಿತ ಮಳೆ ಹೊತ್ತು ತರುವ ಮುಂಗಾರ ಮಾರುತಗಳು ದುರ್ಬಲಗೊಳ್ಳುತ್ತವೆ ಅಥವಾ ಸಾಗುವ ದಿಕ್ಕು ಬದಲಾಗಿ, ಈ ತೇವಾಂಶವು ಪೆಸಿಫಿಕ್ ಸಾಗರದತ್ತ ಆಕರ್ಷಿತವಾಗುತ್ತದೆ. ಹೀಗಾದಾಗ ಭಾರತದ ಆಗಸದಲ್ಲಿ ಮೋಡ ಉಂಟಾಗುವಿಕೆ, ಒಗ್ಗೂಡುವಿಕೆ, ಚಲನೆ ಮತ್ತು ಸಾಂದ್ರತೆ ಕಡಿಮೆಯಾಗಿ ಮಳೆ ಕಡಿಮೆಯಾಗಿ ನೀರಿನ ಅಭಾವ ಉಂಟಾಗುತ್ತದೆ.

ಹೀಗಾದಾಗ ಮಳೆಗಾಲದ ನಡುವೆಯೂ ದೀರ್ಘಾವಧಿಯ ಬಿಸಿಲು ಮತ್ತು ಒಣ ಹವೆ ಉಂಟಾಗಿ, ಜೂನ್ ಮೊದಲೆರಡು ವಾರಗಳಲ್ಲಿ ಬಿತ್ತಿದ/ನೆಟ್ಟ ಬೆಳೆಗಳು ನೀರಿಲ್ಲದೆ ಒಣಗುವ ಜೊತೆಗೆ ಒಣಹವೆಯ ಪರಿಣಾಮದಿಂದಾಗಿ ಕೃಷಿ ಉತ್ಪನ್ನಗಳ ಉತ್ಪಾದನಾ ಪ್ರಮಾಣದ ಮೇಲೆ ಪ್ರಭಾವ ಬೀರುತ್ತದೆ. ದೇಶದಾದ್ಯಂತ ಬೆಳೆಸಲ್ಪಟ್ಟ ಆಹಾರ ಪದಾರ್ಥಗಳ ಪ್ರಮಾಣ ಕಡಿಮೆಯಾಗಿ ಕೊರತೆ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಮಳೆ ಕೊರತೆಯ ಆತಂಕದ ಮಧ್ಯೆ ರಸಗೊಬ್ಬರ ಪೂರೈಕೆಯ ಬಿಕ್ಕಟ್ಟು ಅಕ್ಷರಶಃ ಕೃಷಿಕರ ನಿದ್ದೆಗೆಡಿಸಿದೆ! 2026ರ ಫೆಬ್ರವರಿಯಿಂದ ಶುರುವಾದ ಅಮೆರಿಕಾ-ಇರಾನ್-ಇರಾಕ್ ಯುದ್ಧವು ಸಮಗ್ರ ಜಾಗತಿಕ ಪೂರೈಕೆ ಸರಪಳಿಯನ್ನು, ಮುಖ್ಯವಾಗಿ ರಸಗೊಬ್ಬರ ಪೂರೈಕೆ-ವಿತರಣೆಯನ್ನು ಅಸ್ತವ್ಯಸ್ತಗೊಳಿಸಿದೆ.


ವಿಶ್ವದ ಮೂರನೇ ಒಂದರಷ್ಟು ರಸಗೊಬ್ಬರ ಮತ್ತು ನೈಸರ್ಗಿಕ ಅನಿಲ ಸಾಗಣೆಯಾಗುವ ಹಾರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚಾರಕ್ಕೆ ತೀವ್ರ ಅಡ್ಡಿಯಾಗಿದೆ. ಇದರಿಂದ ನಿರೀಕ್ಷಿತ ಪ್ರಮಾಣದಲ್ಲಿ ಮತ್ತು ಕ್ಲುಪ್ತ ಸಮಯಕ್ಕೆ ರಸಗೊಬ್ಬರ ಭಾರತಕ್ಕೆ ಬರುತ್ತಿಲ್ಲ. ಭಾರತವು ತನ್ನ ದೇಶೀಯ ಯೂರಿಯಾ ಘಟಕಗಳನ್ನು ನಡೆಸಲು ಮಧ್ಯಪ್ರಾಚ್ಯ, ಅದರಲ್ಲೂ ಮುಖ್ಯವಾಗಿ ಕತಾರ್‌ನಿಂದ ದ್ರವೀಕೃತ ನೈಸರ್ಗಿಕ ಅನಿಲವನ್ನು ಬಹುವಾಗಿ ಅವಲಂಬಿಸಿದೆ.

ಯುದ್ಧದ ಕಾರಣ ಅನಿಲ ಪೂರೈಕೆ ಅಸ್ತವ್ಯಸ್ತಗೊಂಡಿದ್ದರಿಂದ, 2026ರ ಮಾರ್ಚ್ ತಿಂಗಳಲ್ಲಿ ಭಾರತದ ರಸಗೊಬ್ಬರ ಉತ್ಪಾದನೆಯು 24.6%ದಷ್ಟು ಕುಸಿತ ಕಂಡಿದೆ.

ಇದೆಲ್ಲದರ ಜೊತೆಗೆ, ಗಾಯದ ಮೇಲೆ ಬರೆ ಎಳೆದಂತೆ ಜಾಗತಿಕ ಮಾರುಕಟ್ಟೆಯಲ್ಲಿ ಯೂರಿಯಾ ಮತ್ತು ಡಿಎಪಿ ಬೆಲೆಗಳು 30%-40%ದಷ್ಟು ದಿಢೀರ್ ಏರಿಕೆಯಾಗಿವೆ. ಭಾರತ ಸರಕಾರ ವಿವಿಧ ಸಬ್ಸಿಡಿಯನ್ನು 11%ದಷ್ಟು ಹೆಚ್ಚಿಸಿ, ಜಾಗತಿಕ ಟೆಂಡರ್ ಮೂಲಕ 13.5 ಲಕ್ಷ ಟನ್ ಯೂರಿಯಾ ಆಮದಿಗೆ ಮುಂದಾಗಿದೆಯಾದರೂ, ಮುಂಗಾರು ಬಿತ್ತನೆಯ ನಿರ್ಣಾಯಕ ಸಮಯದಲ್ಲಿ (ಜೂನ್ -ಜುಲೈ) ಸ್ಥಳೀಯ ಮಟ್ಟದಲ್ಲಿ ರಸಗೊಬ್ಬರದ ಕೊರತೆ ರೈತರನ್ನು ಕಾಡುವ ಆತಂಕವಿದೆ.

ಕೃತಕ ಅಭಾವ ಸೃಷ್ಟಿಯಾಗಿ ಕಳ್ಳ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುವ ಅಪಾಯವೂ ಇದೆ. ಇದು ರೈತನ ಜೇಬಿನ ಮೇಲೆ ನೇರ ಪರಿಣಾಮ ಬೀರಲಿದೆ ಮತ್ತು ಕೃಷಿ ಉತ್ಪಾದನಾ ವೆಚ್ಚ ಹೆಚ್ಚಲಿದೆ. ಒಟ್ಟಾರೆ ಕೃಷಿ ಉತ್ಪಾದನೆ, ಆಹಾರ ದರಗಳು ಮತ್ತು ಗ್ರಾಮೀಣ ಆರ್ಥಿಕತೆಯ ಮೇಲೆ ದೊಡ್ಡ ಪರಿಣಾಮ ಬೀರಲಿದೆ.

ಹವಾಮಾನದ ಪ್ರತಿಕೂಲತೆ ಹಾಗೂ ರಸಗೊಬ್ಬರ ಮುಂತಾದ ಕೃಷಿ ಪರಿಕರಗಳ ಕೊರತೆಯು ಭಾರತದ ಮತ್ತು ವಿಶೇಷವಾಗಿ ಕರ್ನಾಟಕದ ಕೃಷಿ ವಲಯವನ್ನು ತೀವ್ರ ಸಂಕಷ್ಟಕ್ಕೆ ನೂಕುವ ಲಕ್ಷಣಗಳಿವೆ!





ಭತ್ತ, ಮೆಕ್ಕೆಜೋಳ, ಹತ್ತಿ, ಸೋಯಾಬೀನ್, ಕಬ್ಬು, ರಾಗಿ ಮತ್ತು ತೊಗರಿಯಂತಹ ಪ್ರಮುಖ ವಾಣಿಜ್ಯ ಹಾಗೂ ಆಹಾರ ಬೆಳೆಗಳಿಗೆ ಆರಂಭಿಕ ಹಂತದಲ್ಲಿಯೇ ನೀರಿನ ಕೊರತೆ ಮತ್ತು ಪೋಷಕಾಂಶಗಳ ಅಭಾವ ಎಲ್ ನಿನೋದಿಂದಾಗಿ ಎದುರಾಗಲಿದೆ. ಸಕಾಲದಲ್ಲಿ ಮಳೆಯಾಗದೆ ಬಿತ್ತನೆ ವಿಳಂಬವಾದರೆ, ಕಟಾವಿನ ಸಮಯದಲ್ಲಿ ಹವಾಮಾನ ವೈಪರೀತ್ಯ ಇನ್ನಷ್ಟು ಆದಾಗ ಇಳುವರಿ ಗಣನೀಯವಾಗಿ ಕುಸಿಯುತ್ತದೆ.

ಸಕಾಲದಲ್ಲಿ ರಸಗೊಬ್ಬರದ ಅಲಭ್ಯತೆಯು ಬೆಳೆಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಇದರಿಂದ ಒಟ್ಟಾರೆ ಉತ್ಪಾದನಾ ವೆಚ್ಚ ಹೆಚ್ಚಾಗಿ, ರೈತರ ಕೈಗೆ ಬರುವ ನಿವ್ವಳ ಮೊತ್ತ ತೀವ್ರ ಕಡಿಮೆಯಾಗುತ್ತದೆ. ವಾಡಿಕೆಗಿಂತ ಕಡಿಮೆ ಮಳೆಯಾದರೆ ಕೆರೆ-ಕಟ್ಟೆಗಳು ತುಂಬುವುದಿಲ್ಲ ಹಾಗೂ ಅಂತರ್ಜಲ ಮರುಪೂರಣವಾಗುವುದಿಲ್ಲ.

ಇದು ಕೊಳವೆಬಾವಿ ಆಶ್ರಯಿಸಿ ಅಡಿಕೆ, ತೆಂಗು, ಬಾಳೆ ಮುಂತಾದ ಕೃಷಿ ಮಾಡುವ ರೈತರಿಗೂ ಮುಂದಿನ ಬೇಸಿಗೆಯ ಸಂದರ್ಭದಲ್ಲಿ ನೀರಿನ ಕೊರತೆಯನ್ನು ತಂದೊಡ್ಡುತ್ತದೆ. ಮಳೆ ಕಡಿಮೆಯಾಗಿ ಕೃಷಿ ಉತ್ಪನ್ನಗಳ ಬೆಳೆ ಕುಂಠಿತವಾದಾಗ ಜಾನುವಾರುಗಳಿಗೆ ಮೇವಿನ ಕೊರತೆಯೂ ಉಂಟಾಗಲಿದೆ.

ಈ ಉಭಯ ಸಂಕಟವನ್ನು ಎದುರಿಸಲು ಸಾಂಪ್ರದಾಯಿಕ ಹಾಗೂ ಈಗಿನ ಪ್ರಕಾರದ ವ್ಯವಸಾಯ ಪದ್ಧತಿಯನ್ನು ಬದಿಗಿಟ್ಟು, ವೈಜ್ಞಾನಿಕ, ಹವಾಮಾನ ಆಧಾರಿತ ಮತ್ತು ಸಂಪನ್ಮೂಲ-ಮಿತವ್ಯಯದ ಕೃಷಿಯನ್ನು ಅಳವಡಿಸಿಕೊಳ್ಳುವುದು ಕೃಷಿಕರಿಗೆ ಅನಿವಾರ್ಯವಾಗಿದೆ. ಕೃಷಿಕರು ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವ್ಯವಸಾಯ ಮಾಡಬೇಕಾದುದು ಇಂದಿನ ತುರ್ತು.

1. ಜೂನ್ ಬಂತೆಂದು ಮೊದಲ ಮಳೆ ಅಥವಾ ಮುಂಗಾರು ಪೂರ್ವ ಮಳೆಗೆ ಅವಸರದಲ್ಲಿ ಬಿತ್ತನೆ ಮಾಡುವ ತರಾತುರಿ ಖಂಡಿತಾ ಬೇಡ. ಮಣ್ಣಿನಲ್ಲಿ ಸಾಕಷ್ಟು ತೇವಾಂಶ ಹಿಡಿದಿಟ್ಟು ಕೊಳ್ಳುವ ವಾತಾವರಣ ನಿರ್ಮಾಣವಾದ ನಂತರ, ಅಂದರೆ ಮುಂಗಾರು ಮಳೆ ಸ್ಥಿರವಾದ ಮೇಲೆ ಬಿತ್ತನೆ ಕಾರ್ಯ ಆರಂಭಿಸುವುದು ಸೂಕ್ತ.

2. ಭತ್ತ, ಕಬ್ಬು ಮುಂತಾದ ದೀರ್ಘಾವಧಿಯ, ಹೆಚ್ಚು ನೀರು ಬೇಡುವ ಬೆಳೆಗಳ ಬದಲು, ಕಡಿಮೆ ಅವಧಿಗೆ ಕಟಾವಿಗೆ ಬರುವ, ನೀರು ಮತ್ತು ಗೊಬ್ಬರ ಮಿತವಾಗಿ ಬೇಡುವ ಬೆಳೆ/ತಳಿ ಆಯ್ಕೆ ಮಾಡುವುದು ಸಮಂಜಸ. ನೀರಿನ ಅಭಾವವನ್ನು ಸಮರ್ಥವಾಗಿ ಎದುರಿಸುವ ಸಿರಿಧಾನ್ಯಗಳು (ರಾಗಿ, ಸಜ್ಜೆ, ನವಣೆ), ಜೋಳ, ಅಲಸಂದೆ, ಹೆಸರು ಕಾಳು ಮುಂತಾದ ದ್ವಿದಳ ಧಾನ್ಯಗಳಿಗೆ ಆದ್ಯತೆ ನೀಡಬಹುದು. ಇವುಗಳಿಗೆ ರಸಗೊಬ್ಬರವೂ ಕಡಿಮೆ ಸಾಕು.

3. ರಸಗೊಬ್ಬರದ ಕೊರತೆಯಿದೆ ಎಂದು ಆತಂಕದಿಂದ ಅಗತ್ಯಕ್ಕಿಂತ ಹೆಚ್ಚು ದಾಸ್ತಾನು ಬೇಡ. ಇದು ನಷ್ಟದ ಲಾಗಾಯ್ತು.

4. ರಾಸಾಯನಿಕ ಯೂರಿಯಾಕ್ಕೆ ಪರ್ಯಾಯವಾಗಿ, ದ್ರವರೂಪದ ನ್ಯಾನೋ ಯೂರಿ ಯಾ, ನ್ಯಾನೋ ಡಿಎಪಿ ಮುಂತಾದವುಗಳ ಬಳಕೆ ಸೂಕ್ತ. ಇವುಗಳ ಸಾಗಾಣಿಕೆ ಸುಲಭ ಹಾಗೂ ಬೆಳೆಗಳು ಇವುಗಳನ್ನು ಶೀಘ್ರವಾಗಿ ಹೀರಿಕೊಳ್ಳುತ್ತವೆ.

5. ಮಣ್ಣು ಪರೀಕ್ಷೆ ಮಾಡಿಸಿ, ಜಮೀನಿಗೆ ಎಷ್ಟು ಅಗತ್ಯವಿದೆಯೋ ಅಷ್ಟು ಮಾತ್ರ ರಾಸಾಯನಿಕ ಗೊಬ್ಬರಗಳನ್ನು ಕೊಡಬೇಕು. ರಸಗೊಬ್ಬರವನ್ನು ಮೇಲ್ಮೈಗೆ ಎರಚುವ ಬದಲು, ಗಿಡದ ಬೇರುಗಳಿಗೆ ಸೇರಿಸುವ ಪದ್ಧತಿ ಸೂಕ್ತ.

6. ಸಾವಯವ ಕೃಷಿಗೆ ಒತ್ತು ಕೊಡಬೇಕು. ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ ಮತ್ತು ಹಸಿರೆಲೆ ಗೊಬ್ಬರವನ್ನು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆ ಮತ್ತು ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ.

7. ಬೆಳೆಗಳ ಸಾಲುಗಳ ನಡುವೆ ಕೃಷಿ ತ್ಯಾಜ್ಯಗಳಿಂದ ಹೊದಿಕೆ (ಮಲ್ಚಿಂಗ್) ನಿರ್ಮಿಸಿದರೆ ಬಿಸಿಲ ಬೇಗೆಯಿಂದ ಮಣ್ಣಿನ ತೇವಾಂಶ ಆವಿಯಾಗುವುದನ್ನು ಗಣನೀಯವಾಗಿ ತಡೆಯುತ್ತದೆ.

8. ತೆರೆದ ಕಾಲುವೆಗಳ ಮೂಲಕ ನೀರು ಹಾಯಿಸುವುದನ್ನು ನಿಲ್ಲಿಸಿ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಬಳಕೆ ಕಡ್ಡಾಯ ಮಾಡಬೇಕು. ಬೀಳುವ ಪ್ರತಿಯೊಂದು ಹನಿ ಮಳೆ ನೀರನ್ನೂ ಇಂಗಿಸಲು ಕೃಷಿ ಹೊಂಡ, ಬದು ನಿರ್ಮಾಣ ಮತ್ತು ಕಂದಕಗಳ ನಿರ್ಮಾಣ ನೀರು ಹಿಡಿದಿಟ್ಟುಕೊಳ್ಳಲು ಸಹಕಾರಿ.

9. ಮಳೆ ಮತ್ತು ಹವಾಮಾನದ ಅನಿಶ್ಚಿತತೆ ಇರುವುದರಿಂದ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ರಾಜ್ಯ ಸರಕಾರದ ಬೆಳೆ ವಿಮೆ ಯೋಜನೆಗಳಡಿ ನೋಂದಣಿ ಭವಿಷ್ಯದಲ್ಲಿ ಸಹಕಾರಿ. ಬೆಳೆ ವಿಫಲವಾದರೆ ಇದು ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ.

10. ಕೃಷಿ ಪರಿಕರಗಳಿಗಾಗಿ ಹೆಚ್ಚಿನ ಬಡ್ಡಿ ದರದಲ್ಲಿ ಖಾಸಗಿ ಸಾಲ ಮಾಡುವುದನ್ನು ಆದಷ್ಟು ತಪ್ಪಿಸುವುದರ ಜೊತೆಗೆ ಸರ್ಕಾರಿ ಅಥವಾ ಸಹಕಾರ ಸಂಘಗಳ ನೆರವು ಪಡೆಯಬೇಕು.

2026ರ ಮುಂಗಾರು ದೇಶದ ಕೃಷಿಕರ ಪಾಲಿಗೆ ನಿಜವಾದ ಅಗ್ನಿಪರೀಕ್ಷೆ! ಎಲ್ ನಿನೋ ಸೃಷ್ಟಿಸುತ್ತಿರುವ ಜಲಕ್ಷಾಮ ಹಾಗೂ ಅಂತಾರಾಷ್ಟ್ರೀಯ ಬಿಕ್ಕಟ್ಟುಗಳು ತಂದೊಡ್ಡಿರುವ ರಸಗೊಬ್ಬರ ಅಭಾವ – ಈ ಎರಡೂ ಸವಾಲುಗಳು ರೈತರ ಸಂಯಮ ಮತ್ತು ಕೃಷಿ ಅನುಭವವನ್ನು ಒರೆಗೆ ಹಚ್ಚಲಿವೆ. ಪ್ರಕೃತಿಯನ್ನು ನಿಯಂತ್ರಿಸಲು ಸಾಧ್ಯವಿಲ್ಲ!

ನಮ್ಮ ಕೃಷಿ ಪದ್ಧತಿಯಲ್ಲಿ ಈ ಮೇಲಿನ ಬದಲಾವಣೆಗಳನ್ನು ಮಾಡಿಕೊಂಡರೆ ಆಗಲಿರುವ ನಷ್ಟ-ವೆಚ್ಚವನ್ನು ಕನಿಷ್ಠ ಮಟ್ಟಕ್ಕೆ ಇಳಿಸಬಹುದು. ತಂತ್ರಜ್ಞಾನ ಆಧಾರಿತ ಕೃಷಿ, ನೀರು-ಗೊಬ್ಬರದ ಮಿತಬಳಕೆ, ಸರ್ಕಾರದ ಬೆಂಬಲ ವ್ಯವಸ್ಥೆಗಳ ಸಮರ್ಪಕ ಬಳಕೆ ಮಾತ್ರ ಈ ಬಿಕ್ಕಟ್ಟಿನಿಂದ ಕೃಷಿ ವಲಯವನ್ನು ಪಾರು ಮಾಡಬಲ್ಲ ಅಸ್ತ್ರಗಳಾಗಿವೆ. ಎಲ್ಲಾ ಏರಿಳಿತಗಳ ನಡುವೆಯೂ ಕೃಷಿಯಲ್ಲಿ ಖುಷಿ ಕಾಣುವ ಕೋಟ್ಯಂತರ ಕೃಷಿಕರ ಬಾಳು ಇನ್ನಷ್ಟು-ಮತ್ತಷ್ಟು ಹಸನಾಗಲಿ. ಕೃಷಿತೋ ನಾಸ್ತಿ ದುರ್ಭಿಕ್ಷಂ ಎಂದರೆ ಕೃಷಿಯನ್ನು ನಂಬಿದವರಿಗೆ ಎಂದಿಗೂ ಬರಗಾಲವಿಲ್ಲ ಎನ್ನುವ ಮಾತು ನಿಜವಾಗಲಿ.

**– ರವೀ** ಸಜಂಗದ್ದೆ

# ಬೆಳ್ಳುಳ್ಳಿ ಸಿಪ್ಪೆಯನ್ನು ಸುಲಿಯುವ ಸುಲಭ ವಿಧಾನಗಳು

ಅಡುಗೆ ಮನೆಯ ಅವಿಭಾಜ್ಯ ಅಂಗವಾಗಿರುವ ಬೆಳ್ಳುಳ್ಳಿಯ ಸಿಪ್ಪೆಯನ್ನು ಸುಲಿಯುವುದೇ ದೊಡ್ಡ ತಲೆಬಿಸಿ. ಅದರಲ್ಲೂ ತುಂಬಾ ಬೆಳ್ಳುಳ್ಳಿಗಳನ್ನು ಸುಲಿಯುವುದಿದ್ದರೆ ಉಗುರು, ಬೆರಳು ಎಲ್ಲವೂ ನೋವಾಗಲು ಪ್ರಾರಂಭವಾಗುತ್ತದೆ. ಕೆಲವು ಆಲಸಿಗಳಂತೂ ಸಿಪ್ಪೆ ಸಹಿತವಾಗಿಯೇ ಬೆಳ್ಳುಳ್ಳಿಯನ್ನು ಪದಾರ್ಥಗಳಿಗೆ, ಸಾರಿಗೆ ಬಳಕೆ ಮಾಡುತ್ತಾರೆ.

ಆಹಾರದ ರುಚಿಯನ್ನು ಹೆಚ್ಚಿಸುವಲ್ಲಿ ಬೆಳ್ಳುಳ್ಳಿ ಪಾತ್ರ ಬಹು ದೊಡ್ಡದು. ಇದನ್ನು ಹೆಚ್ಚಿನ ಮನೆಗಳಲ್ಲಿ ಪ್ರತಿದಿನ ಬಳಸಲಾಗುತ್ತದೆ. ಇದು ಆಹಾರದ ರುಚಿಯನ್ನು ಹೆಚ್ಚಿಸುತ್ತದೆ. ಇದು ಯಾವುದೇ ಖಾದ್ಯಕ್ಕೆ ರುಚಿಯ ಸ್ಪರ್ಶವನ್ನು ನೀಡುತ್ತದೆ. ಕೆಲವರು ಇದನ್ನು ಬೇಳೆಗೆ ಸೇರಿಸುತ್ತಾರೆ, ಇತರರು ತರಕಾರಿಗಳಿಗೆ ಸೇರಿಸುತ್ತಾರೆ, ಮತ್ತು ಹಲವರು ಚಟ್ನಿ ಅಥವಾ ಉಪ್ಪಿನಕಾಯಿ ಮಾಡಲು ಇದನ್ನು ಬಳಸುತ್ತಾರೆ. ಇದು ರುಚಿಕರವಾಗಿರುತ್ತದೆ, ಆದರೆ ಅದನ್ನು ಸಿಪ್ಪೆ ತೆಗೆಯುವ ಕೆಲಸ ಮಾತ್ರ ತಲೆನೋವನ್ನುಂಟು ಮಾಡುತ್ತೆ. ಬೆಳ್ಳುಳ್ಳಿಯ ಸಿಪ್ಪೆಯನ್ನು ತೆಗೆಯುವ ಸರಳವಾದ ಕೆಲವು ಟಿಪ್ಸ್‌ಗಳು ಇಲ್ಲಿವೆ.

ಬೆಳ್ಳುಳ್ಳಿ ಸ್ವಲ್ಪ ಜಿಗುಟಾಗಿರುತ್ತದೆ, ಆದ್ದರಿಂದ ಅದರ ಸಿಪ್ಪೆ ಸುಲಿಯುವುದರಿಂದ ಕೈ ವಾಸನೆ ಬರುತ್ತದೆ, ಜೊತೆಗೆ ಅದು ಕಷ್ಟದ ಕೆಲಸವೂ ಹೌದು. ದೊಡ್ಡ ಸಮಸ್ಯೆ ಎಂದರೆ ಅದು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಇದು ಹೆಚ್ಚಾಗಿ ಜನರು ಬೆಳ್ಳುಳ್ಳಿಯನ್ನು ಕಡಿಮೆ ಬಳಸುವಂತೆ ಮಾಡುತ್ತದೆ ಅಥವಾ ಬೆಳ್ಳುಳ್ಳಿ ಹಾಕಿ ಅಡುಗೆ ಮಾಡೋದನ್ನೆ ತಪ್ಪಿಸುತ್ತಾರೆ ಜನ. ಆದರೆ ಇನ್ನು ಮುಂದೆ ನೀವು ಕಷ್ಟಪಡಬೇಕಾಗಿಲ್ಲ. ಯಾಕಂದ್ರೆ ಇವತ್ತು ನಾವು ನಿಮಗೆ ಬೆಳ್ಳುಳ್ಳಿಯ ಸಿಪ್ಪೆ ಸುಲಿಯುವ ಸುಲಭವಾದ ವಿಧಾನವನ್ನು ಹೇಳುತ್ತೇವೆ.

ಬಿಸಿನೀರಿನ ಮ್ಯಾಜಿಕ್: ಬೆಳ್ಳುಳ್ಳಿ ಸಿಪ್ಪೆ ತೆಗೆಯಲು ಬಿಸಿನೀರು ಸುಲಭವಾದ ಮಾರ್ಗವಾಗಿದೆ. ನೀವು 500 ಗ್ರಾಂ ನಿಂದ ಒಂದು ಕಿಲೋಗ್ರಾಂ ಅಥವಾ ಅದಕ್ಕಿಂತ ಹೆಚ್ಚು ಬೆಳ್ಳುಳ್ಳಿಯನ್ನು ಸಿಪ್ಪೆ ತೆಗೆಯಬೇಕಾದರೆ ಈ ವಿಧಾನವು ಉತ್ತಮವಾಗಿದೆ. ಸಂಪೂರ್ಣ ಬೆಳ್ಳುಳ್ಳಿಯಿಂದ ಬೆಳ್ಳುಳ್ಳಿ ಎಸಳುಗಳನ್ನು ಬೇರ್ಪಡಿಸಿ. ನಂತರ, ಒಂದು ದೊಡ್ಡ ಪಾತ್ರೆಯಲ್ಲಿ ಬಿಸಿ ನೀರು ಹಾಕಿ. (ಕೊಂಚ ಬಿಸಿನೀರು) ಮತ್ತು ಬೆಳ್ಳುಳ್ಳಿ ಎಸಳುಗಳನ್ನು 5-10 ನಿಮಿಷಗಳ ಕಾಲ ನೆನೆಸಿಡಿ. ಅವುಗಳನ್ನು ನೀರಿನಿಂದ ತೆಗೆದ ನಂತರ, ಸಿಪ್ಪೆ ಸಡಿಲಗೊಳ್ಳುತ್ತದೆ. ಅವುಗಳನ್ನು ನಿಮ್ಮ ಕೈಗಳಿಂದ ಲಘುವಾಗಿ ಉಜ್ಜಿಕೊಳ್ಳಿ. ಇದರಿಂದ ಸಿಪ್ಪೆ ಸುಲಭವಾಗಿ ಹೊರಬರುತ್ತದೆ. ನಿಮಗೆ ಹೆಚ್ಚಿನ ವೇಗ ಬೇಕಾದರೆ, ಬಿಸಿ ನೀರಿಗೆ ಸ್ವಲ್ಪ ಅಡಿಗೆ ಸೋಡಾ ಸೇರಿಸಿ; ಸಿಪ್ಪೆ ಇನ್ನೂ ವೇಗವಾಗಿ ಹೊರಬರುತ್ತದೆ.

ಚಾಕುವಿನಿಂದ ಪುಡಿಮಾಡುವ ವಿಧಾನ: ನೀವು ಸ್ವಲ್ಪ ಪ್ರಮಾಣದ ಬೆಳ್ಳುಳ್ಳಿಯನ್ನು ಸಿಪ್ಪೆ ತೆಗೆಯಬೇಕಾದಾಗ, ಉದಾಹರಣೆಗೆ ಒಗ್ಗರಣೆಗಾಗಿ ಸಿಪ್ಪೆ ತೆಗೆಯಬೇಕು ಎಂದಾದರೆ, ಇದು ಅತ್ಯಂತ ವೇಗವಾದ ಮತ್ತು ಸುಲಭವಾದ ವಿಧಾನವಾಗಿದೆ. ಬೆಳ್ಳುಳ್ಳಿ ಎಸಳುಗಳನ್ನು ಚಾಪಿಂಗ್ ಬೋರ್ಡ್ ಮೇಲೆ ಇರಿಸಿ. ಅಗಲವಾದ ಚಾಕುವಿನ (ಅಥವಾ ರೋಲಿಂಗ್ ಪಿನ್) ಚಪ್ಪಟೆಯಾದ ಬದಿಯನ್ನು ಬೆಳ್ಳುಳ್ಳಿ ಮೇಲೆ ಇರಿಸಿ. ನಿಮ್ಮ ಅಂಗೈಯಿಂದ ನಿಧಾನವಾಗಿ ಒತ್ತಿರಿ. ಬಿರುಕು ಬಿಡುವ ಶಬ್ದವು ಸಿಪ್ಪೆ ಸಡಿಲಗೊಂಡಿದೆ ಮತ್ತು ಈಗ ಸುಲಭವಾಗಿ ತೆಗೆಯಲ್ಪಡುತ್ತದೆ ಎಂದು ಸೂಚಿಸುತ್ತದೆ. ಈ ವಿಧಾನವನ್ನು ವೃತ್ತಿಪರ ಅಡುಗೆಯವರು ಸಹ ಬಳಸುತ್ತಾರೆ.

ಜಾರ್ ಶೇಕ್ ವಿಧಾನ: ಈ ವಿಧಾನವು ವೇಗವಾಗಿ ಕೆಲಸ ಮಾಡುತ್ತದೆ, ವಿಶೇಷವಾಗಿ ಇಡೀ ಬೆಳ್ಳುಳ್ಳಿ ಸಿಪ್ಪೆ ತೆಗೆಯಲು ಇದನ್ನು ಟ್ರೈ ಮಾಡಬಹುದು. ಇದನ್ನು ಮಾಡಲು, ಬೆಳ್ಳುಳ್ಳಿಯನ್ನು ಲಘುವಾಗಿ ಒಡೆದು ಎಸಳು ಬೇರ್ಪಡಿಸಿ. ಅವುಗಳನ್ನು ಈಗ ದೊಡ್ಡ ಜಾರ್ ಅಥವಾ ಟಿಫಿನ್‌ನಲ್ಲಿ ಹಾಕಿ ಮುಚ್ಚಳ ಮುಚ್ಚಿ. ಬೆಳ್ಳುಳ್ಳಿ ಎಸಳುಗಳು ಒಟ್ಟಿಗೆ ಸೇರುವಂತೆ 20-40 ಸೆಕೆಂಡುಗಳ ಕಾಲ ಅವುಗಳನ್ನು ಅಲ್ಲಾಡಿಸಿ. ಹೀಗೆ ಮಾಡಿದಾಗ ಬೆಳ್ಳುಳ್ಳಿಯ ಸಿಪ್ಪೆಗಳು ತಳದಲ್ಲಿ ಸೇರಿಕೊಳ್ಳುತ್ತವೆ. ಮೈಕ್ರೋವೇವ್ ಸ್ಮಾರ್ಟ್ ಟ್ರಿಕ್: ನಿಮ್ಮಲ್ಲಿ ಮೈಕ್ರೋವೇವ್ ಆವನ್ ಇದ್ದರೆ, ಈ ವಿಧಾನವು ಕ್ಷಣಾರ್ಧದಲ್ಲಿ ಕೆಲಸ ಮಾಡುತ್ತದೆ. ಬೆಳ್ಳುಳ್ಳಿ ಎಸಳುಗಳನ್ನು ಮೈಕ್ರೋವೇವ್-ಸೇಫ್ ಪ್ಲೇಟ್ ಅಥವಾ ಬಟ್ಟಲಿನಲ್ಲಿ ಇರಿಸಿ. 15-20 ಸೆಕೆಂಡುಗಳ ಕಾಲ (ಅಥವಾ ಹೆಚ್ಚಿನ ಎಸಳುಗಳಿಗೆ 30 ಸೆಕೆಂಡುಗಳು) ಹೆಚ್ಚಿನ ಶಾಖದಲ್ಲಿ ಬಿಸಿ ಮಾಡಿ. ಶಾಖದಿಂದಾಗಿ ಎಸಳುಗಳ ಮೇಲಿನ ಸಿಪ್ಪೆ ಒಣಗಲು ಆರಂಭವಾಗುತ್ತದೆ. ಈವಾಗ ಸುಲಭವಾಗಿ ಬೆಳ್ಳುಳ್ಳಿ ಸಿಪ್ಪೆ ಸುಲಿಯಬಹುದು.

ಈ ಎಲ್ಲಾ ಟಿಪ್ಸ್‌ಗಳನ್ನು ಬಳಸಿ ಬೆಳ್ಳುಳ್ಳಿಯ ಸಿಪ್ಪೆಯನ್ನು ತೆಗೆಯಬಹುದು. ಹಾಗಾದರೆ ಇನ್ನೇಕೆ ತಡ? ಸಿಪ್ಪೆ ಬಿಡಿಸಿ, ರುಚಿಕರ ಬೆಳ್ಳುಳ್ಳಿಯ ಖಾದ್ಯಗಳನ್ನು, ಉಪ್ಪಿನ ಕಾಯಿಯನ್ನು ತಯಾರಿಸಿ.

**– ಕೆ.ಪಿ.ಅಶ್ವಿನ್** ರಾವ್



# ಲಕ್ಷ್ಮೀದೇವಿ

ಎಲ್ಲಿ ಹೋಗಿ ಸತ್ತನೋ ಏನೋ ತಿಮ್ಮ, ಎಂಟು ಗಂಟೆಯಾದರೂ ಬರಲೇ ಇಲ್ಲ. ಏ. ಎಂದು ಒಳಗೆ ಶ್ರೀಮತಿ ಲಕ್ಷ್ಮೀದೇವಿಯವರು ಎಂಟು ಗಂಟೆಯಾದರೂ ಬರದಿದ್ದ ಆಳಿನ ಮೇಲೆ ಕೋಪಿಸಿಕೊಂಡರು.

ಚಹಕ್ಕೆ ಒಳಗಿನಿಂದ ಕರೆಬರಲಿಲ್ಲವೆಂದು ಲಕ್ಷ್ಮೀಪತಿರಾಯರು ಹೀಗೆ ಇಣಿಕಿನೋಡಿದರು. ಪತ್ನಿಯು ಸಿಟ್ಟಿನಿಂದ ಏನೇನೋ ಹಲುಬುತ್ತ ಕೋಣೆಯಿಂದ ಕೋಣೆಗೆ ಸುಳುಮುಳು ಅಲೆಯುತ್ತಿದ್ದಾಳೆ; ಪಾತ್ರೆಗಳನ್ನು ಸರಿಸುತ್ತಿದ್ದಾಳೆ; ವಸ್ತ್ರಗಳನ್ನು ರಾಶಿ ಹಾಕುತ್ತಿದ್ದಾಳೆ.

ರಾಯರ ಪುತ್ರನು ಏನೋ ಬಾಯಿಗೆ ಹಾಕಿಕೊಂಡು ಹೊರಗೆ ಬಂದನು. ಗೋಪೂ ನೋಡು. ಒಳಗೆ ಹೋಗಿ ನಿನ್ನ ಅಮ್ಮನ ಹತ್ತಿರ ಹೇಳು– ಆಳು ಇನ್ನೂ ಬರಲಿಲ್ಲ ಅಂತ ಕಾಣುತ್ತದ; ನೀನೇ ಎಮ್ಮೆ ಹಿಂಡಿ ಚಹ ಮಾಡಿಕೊಡು.

ಪುತ್ರನು ಒಳಗೆ ಹೋಗಿ ತಂದೆಯ ಅಭಿಪ್ರಾಯವನ್ನು ತಾಯಿಗೆ ತನ್ನ ತೊದಲು ನುಡಿಯಲ್ಲಿ ತಿಳಿಸಿದನು.

ಚಹವಿಲ್ಲದೆ ಮಿಡುಕುತ್ತಿದ್ದ ಶ್ರೀಮತಿ ಲಕ್ಷ್ಮೀದೇವಿಯವರು ಕೋಪವನ್ನೆಲ್ಲ ಕೇಂದ್ರೀಕರಿಸಿಕೊಂಡು ಹೊರಗೆ ನುಗ್ಗಿ ಬಂದು ಅಲ್ಲ, ನನ್ನನ್ನು ನಿಮಗೆ ನನ್ನಪ್ಪ ಐದು ಸಾವಿರ ರೂಪಾಯಿ ಒಟ್ಟಿಗೆ ಕೊಟ್ಟಿದ್ದು ಎಮ್ಮೆ ಹಿಂಡಲಿಕ್ಕಲ್ಲ. ತಿಳಿಯಿತೇ?

ಚಹವಿಲ್ಲದೆ ಮಿಡುಕುತ್ತಿದ್ದ ಶ್ರೀಮಾನ್ ಲಕ್ಷ್ಮೀಪತಿ ರಾಯರು ತಮ್ಮ ಪತ್ನಿಯ ಮಾತಿನ ಮಳೆಯಲ್ಲಿ ತೊಯ್ದು ಮುದ್ದೆಯಾಗಿ ಮಂಕನಂತೆ ಕುಳಿತುಬಿಟ್ಟರು. ಚಕಾರ ಮಾತಾಡಲಿಲ್ಲ ಅವರು.

ಆಳು ಬಂದು ಎಮ್ಮೆ ಹಿಂಡಿ, ಚಹಮಾಡಿ, ಇಬ್ಬರೂ ಕುಡಿದು ತಮ್ಮ ನಿತ್ಯದ ಕಾರ್ಯಕಲಾಪಗಳಿಗೆ ತೊಡಗಿದರೇನೋ ನಿಜ. ಆದರೆ ರಾಯರ ತಲೆ ಕಿರಿಕಿರಿ ಉಳಿಯಿತು.

ಸಂಜೆಯ ಮುಂದೆ ಅವರು ನಾಳೆ ಸಂಜೆ ಬರುತ್ತೇನೆ. ಎಂದು ಹೇಳಿ ಹೊರಟರು.



ಮರುದಿನ ಅವರು ಬರಲು ತುಸು ತಡವಾಯಿತು; ಸಂಜೆಯ ಬದಲು ರಾತ್ರಿಯಾಯಿತು. ಹೊಸ್ತಿಲಿಗೆ ಕಾಲಿಡುವ ಮುಂಚೆ ಲಕ್ಷ್ಮೀದೇವಿಯವರು ತಮ್ಮ ಪತಿಯು ತಡವಾಗಿ ಬಂದ ಬಗ್ಗೆ ಗುಡುಗಿ ಮಿಂಚಿ ಮಾತಿನ ಮಳೆಗರೆದರು.

ರಾಯರು ಚಕಾರ ಮಾತಾಡದೆ ಐದು ಸಾವಿರ ಮುಟ್ಟಿದ ಬಗ್ಗೆ ತಮ್ಮ ಮಾವಂದಿರು-ಅರ್ಥಾತ್ ದೇವಿಯವರ ತಂದೆಯವರು ಕೊಟ್ಟ ಪಾವತಿಯನ್ನು ತಮ್ಮ ಪತ್ನಿಯ ದೃಷ್ಟಿಗೆ ಹಿಡಿದರು.

ಲಕ್ಷ್ಮೀದೇವಿಯ ಕಣ್ಣು ತುಂಬಿ ಬಂದುವು. ಅವರು-ಅಲ್ಲ-ಅವಳು-ನಿಜವಾಗಿ (ಕಂಬನಿ) ಮಳೆಗರೆದಳು.

ಮರುದಿನ ಮುಂಜಾನೆ ರಾಯರು ಎಚ್ಚರಾಗಿ ಕಣ್ಣು ತೆರೆಯುವಾಗ ಲಕ್ಷ್ಮೀದೇವಿ ಕಸ ಹೊಡೆಯುತಿದ್ದಾಳೆ!

# ಜೂನ್ 5ರಂದು ರಾಜ್ಯಕ್ಕೆ ಮುಂಗಾರು ಪ್ರವೇಶ

• ಪ್ರಜೋದಯ ವರದಿ



**ಬೆಂಗಳೂರು:** ದೇಶದ ಕೃಷಿ ಕ್ಷೇತ್ರದ ಜೀವನಾಡಿಯಾದ ನೈಋತ್ಯ ಮುಂಗಾರು ಆಗಮನದ ಕುರಿತು ಭಾರತೀಯ ಹವಾಮಾನ ಇಲಾಖೆ ಮಹತ್ವದ ಅಧಿಕೃತ ಮುನ್ಸೂಚನೆ ನೀಡಿದೆ. ಈ ವರ್ಷದ ಮುಂಗಾರು ಜೂನ್ 5ರ ಸುಮಾರಿಗೆ ಕರಾವಳಿ ಕರ್ನಾಟಕಕ್ಕೆ ಅಧಿಕೃತವಾಗಿ ಆಗಮಿಸಲಿದೆ ಎಂದು ಹವಾಮಾನಶಾಸ್ತ್ರಜ್ಞರು ಸ್ಪಷ್ಟಪಡಿಸಿದ್ದಾರೆ.

ಕೇರಳದ ಅನೇಕ ಭಾಗಗಳು ಮತ್ತು ಅರಬ್ಬಿ ಸಮುದ್ರದ ದಕ್ಷಿಣ ಪ್ರದೇಶದಲ್ಲಿ ಮುಂಗಾರು ಮಳೆಯ ಚಲನೆಗೆ ಈಗಾಗಲೇ ಪರಿಸ್ಥಿತಿಗಳು ಅನುಕೂಲಕರವಾಗಿವೆ ಮತ್ತು ರಾಜ್ಯದಲ್ಲಿ ಮಳೆ ನೀರಾವರಿ ನಿಗದಿಯಂತೆ ಪ್ರಾರಂಭವಾಗಲಿದೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದ ಕರಾವಳಿ ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಕಳೆದ ಕೆಲವು ವಾರಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ಮಣ್ಣಿನ ತೇವಾಂಶ ಹೆಚ್ಚಾಗಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಮತ್ತು ಮಧ್ಯ ಕರ್ನಾಟಕದ ಜಿಲ್ಲೆಗಳಲ್ಲಿ, ಭಾರಿ ಮಳೆಯು ಕೃಷಿ ಕೆಲಸಕ್ಕೆ ಉತ್ತಮ ಆರಂಭವನ್ನು ನೀಡಿದೆ. ಹವಾಮಾನ ಇಲಾಖೆಯ ಬೆಂಗಳೂರು ಕೇಂದ್ರದ ತಜ್ಞರ ಪ್ರಕಾರ, ಮುಂಗಾರು ಆರಂಭಿಕ ಹಂತದಲ್ಲಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಉತ್ತಮ ಮಳೆಯನ್ನು ತರುತ್ತದೆ ಮತ್ತು ನಂತರ ಒಳನಾಡಿನ ಕಡೆಗೆ ಚಲಿಸುತ್ತದೆ.

ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿರುವ ದೀರ್ಘಾವಧಿಯ ಮುನ್ಸೂಚನೆಯ ಪ್ರಕಾರ, ಈ ವರ್ಷದ ಮುಂಗಾರು ಋತುವಿನ ಒಟ್ಟು ಮಳೆ ಸರಾಸರಿಗಿಂತ ಸ್ವಲ್ಪ ಕಡಿಮೆ ಇರುವ ಸಾಧ್ಯತೆಯಿದೆ. ಮುಂಗಾರು ಋತುವಿನ ಒಟ್ಟು ಮಳೆ ದೀರ್ಘಾವಧಿಯ ಸರಾಸರಿಯ ಶೇ.92 ರಷ್ಟು ಇರಲಿದೆ ಎಂದು ನಿರೀಕ್ಷಿಸಲಾಗಿದೆ. ಪೆಸಿಫಿಕ್ ಮಹಾಸಾಗರದಲ್ಲಿ ಎಲ್ ನಿನೋ ವಿದ್ಯಮಾನ ಮತ್ತು ಹಿಂದೂ ಮಹಾಸಾಗರದಲ್ಲಿ ದ್ವಿಧ್ರುವಿ ಪ್ರಕ್ರಿಯೆಯು ಮುಂಗಾರು ಮಾರುತಗಳ ತೀವ್ರತೆಯ ಮೇಲೆ ಪರಿಣಾಮ ಬೀರುತ್ತಿದೆಂದು ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ.


ಕರ್ನಾಟಕದ ಪಶ್ಚಿಮ ಕರಾವಳಿ ಮತ್ತು ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರತಿ ವರ್ಷ 2000 ರಿಂದ 3000 ಮಿಮೀ ಭಾರೀ ಮಳೆಯಾಗುವ ಇತಿಹಾಸವಿದೆ. ಈ ಬಾರಿಯೂ ಸಹ, ಮುಂಗಾರು ಆರಂಭದ ದಿನಗಳಲ್ಲಿ, ಅಂದರೆ ಜೂನ್ 3 ರಿಂದ ಜೂನ್ 6ರ ನಡುವೆ ಕರಾವಳಿ ಕರ್ನಾಟಕದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಹವಾಮಾನದ ಲ್ಲಿನ ಬದಲಾವಣೆಯಿಂದಾಗಿ ಕರಾವಳಿಯಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ ಮತ್ತು ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಪ್ರಸ್ತುತ ಹವಾಮಾನ ಪರಿಸ್ಥಿತಿಗಳ ಪ್ರಕಾರ, ವಿದರ್ಭದಿಂದ ದಕ್ಷಿಣ ಕೇರಳ, ತೆಲಂಗಾಣ, ರಾಯಲಸೀಮಾ ಮತ್ತು ದಕ್ಷಿಣ ಒಳನಾಡಿನ ಕಡೆಗೆ ಕಡಿಮೆ ಒತ್ತಡದ ಪ್ರದೇಶವು ಸಾಗಿದೆ. ಈ ಹವಾಮಾನದ ಪ್ರಭಾವದಿಂದಾಗಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಹಾಸನ, ಚಿಕ್ಕಮಗಳೂರು ಮತ್ತು ಚಾಮರಾಜನಗರದ ದಕ್ಷಿಣ ಒಳನಾಡಿನ ಜಿಲ್ಲೆ ಗಳಲ್ಲಿ ಮಧ್ಯಮದಿಂದ ಉತ್ತಮ ಮಳೆಯಾಗುತ್ತಿದೆ. ರಾಯಚೂರು ಜಿಲ್ಲೆಯ ಬಳಗಾನೂರು, ಹಾಸನದ ಅರಕಲಗೂಡು ಮತ್ತು ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ ಗಮನಾರ್ಹ ಮಳೆ ದಾಖಲಾಗಿದೆ.

ಉತ್ತರ ಒಳನಾಡಿನ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ ಮತ್ತು ಹಾವೇರಿಯಲ್ಲಿ ಜೂನ್ ಮೊದಲ ವಾರದವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಈ ಪ್ರದೇಶಗಳಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ ಮತ್ತು ನಾಗರಿಕರು ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಒಳನಾಡಿನ ಭಾಗಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಸ್ವಲ್ಪ ಬದಲಾವಣೆ ಇದ್ದರೂ, ಮೋಡ ಕವಿದ ವಾತಾವರಣ ಮುಂದುವರಿಯುತ್ತದೆ.

## ಲೆಬನಾನ್‌ನಿಂದ ಇಸ್ರೇಲ್ ಪಡೆ ವಾಪಸ್
# ನೆತನ್ಯಾಹು ವಿರುದ್ಧ ಟ್ರಂಪ್ ಆಕ್ರೋಶ

• ಪ್ರಜೋದಯ ವರದಿ



**ವಾಷಿಂಗ್ಟನ್:** ಲೆಬನಾನ್ ಮೇಲೆ ದಾಳಿ ನಡೆಸದಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಮನವೊಲಿಸಿದ್ದು, ತಮ್ಮ ಪಡೆಗಳನ್ನು ಅವರು ಹಿಂತೆಗೆದುಕೊಂಡಿದ್ದಾ ರೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ.

ಲೆಬನಾನ್ ಮೇಲೆ ಇಸ್ರೇಲ್ ದಾಳಿ ಖಂಡಿಸಿ ಅಮೇರಿಕಾದೊಂದಿಗೆ ಮಾತುಕತೆ ಕೊನೆಗೊಳಿಸು ವುದಾಗಿ ಇರಾನ್ ಎಚ್ಚರಿಸಿತ್ತು. ಅದರ ಬೆನ್ನಲ್ಲೇ ಮಂಗಳವಾರ ನೆತನ್ಯಾಹುಗೆ ದೂರವಾಣಿ ಕರೆ ಮಾಡಿದ್ದ ಟ್ರಂಪ್, ಬೈರೂತ್ ಮೇಲೆ ದಾಳಿ ಮಾಡುವುದನ್ನು ನಿಲ್ಲಿಸುವಂತೆ ಎಚ್ಚರಿಕೆ ನೀಡಿದ್ದರು.

ನಿನಗೇನಾದರೂ ಹುಚ್ಚು ಹಿಡಿದಿದೆಯೇ? ನಾನು ಇಲ್ಲದಿದ್ದರೆ ನೀನು ಜೈಲಿನಲ್ಲಿರುತ್ತಿದ್ದೆ. ನಾನು ನಿನ್ನನ್ನು ಉಳಿಸುತ್ತಿದ್ದೇನೆ. ಈಗ ಎಲ್ಲರೂ ನಿನ್ನನ್ನು ದ್ವೇಷಿಸುತ್ತಿದ್ದಾರೆ. ಅದರಿಂದಾಗಿ ಇಸ್ರೇಲ್‌ಗೆ ಕೆಟ್ಟ ಹೆಸರು ಬಂದಿದೆ ಎಂದು ಟ್ರಂಪ್, ನೆತನ್ಯಾಹು ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಅದರ ಬೆನ್ನಲ್ಲೇ, ಲೆಬನಾನ್‌ನಿಂದ ತಮ್ಮ ಪಡೆಗಳನ್ನು ಹಿಂತೆಗೆದುಕೊಳ್ಳುತ್ತಿ ರುವುದಾಗಿ ನೆತನ್ಯಾಹು ತಿಳಿಸಿದ್ದರು.

ಈ ವಿಷಯವನ್ನು ಟ್ರುತ್ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ಟ್ರಂಪ್, ಪರಸ್ಪರ ದಾಳಿ ನಡೆಸುವುದನ್ನು ನಿಲ್ಲಿಸುವುದಾಗಿ ಇಸ್ರೇಲ್ ಮತ್ತು ಹಿಜ್ಬುಲ್ಲಾ ಒಪ್ಪಿಕೊಂಡಿವೆ ಎಂದು ತಿಳಿಸಿದ್ದಾರೆ.

ನಾನು ಇಂದು ನೆತನ್ಯಾಹು ಅವರೊಂದಿಗೆ ಮಾತನಾಡಿದೆ. ಬೈರೂತ್ ಮೇಲೆ ದೊಡ್ಡ ಮಟ್ಟದ ದಾಳಿ ನಡೆಸದಂತೆ ಅವರಿಗೆ ವಿನಂತಿಸಿದೆ. ಅವರು ತಮ್ಮ ಪಡೆಗಳನ್ನು ಹಿಂತೆಗೆದುಕೊಂಡಿದ್ದಾರೆ. ನೆತನ್ಯಾಹು ಅವರಿಗೆ ಧನ್ಯವಾದಗಳು ಎಂದು ಬರೆದುಕೊಂಡಿದ್ದಾರೆ.

ಮುಂದುವರಿದು, ನಾನು ಹಿಜ್ಬುಲ್ಲಾ ಪ್ರತಿನಿಧಿಗಳೊಂದಿಗೂ ಮಾತನಾಡಿದ್ದೇನೆ. ಇಸ್ರೇಲ್ ಸೈನಿಕರ ಮೇಲೆ ಗುಂಡು ಹಾರಿಸುವುದನ್ನು ನಿಲ್ಲಿಸಲು ಒಪ್ಪಿಕೊಂಡಿದ್ದಾರೆ. ಅದೇ ರೀತಿ, ಇಸ್ರೇಲ್ ಕೂಡ ಅವರ ಮೇಲೆ ಗುಂಡು ಹಾರಿಸುವುದನ್ನು ನಿಲ್ಲಿಸಲು ಒಪ್ಪಿಕೊಂಡಿದೆ. ಇದು ಎಷ್ಟು ದಿನ ಮುಂದುವರಿಯುತ್ತದೆ ನೋಡೋಣ ಎಂದು ಹೇಳಿದ್ದಾರೆ.

## ರಾಜಶೇಖರ್ ನಿಧನ

• ಪ್ರಜೋದಯ ವರದಿ



**ಆಲೂರು:** ತಾಲ್ಲೂಕಿನ ಕಸಬಾ ಹೋಬಳಿಯ ಮರಸುಕೊಪ್ಪಲು ನಿವಾಸಿ ಹಾಸನದ ಎವಿಕೆ ಕಾಲೇಜು ನಿವೃತ್ತ ನೌಕರ ರಾಜಶೇಖರ್ (75) ಅವರು ಹೃದಯಾಘಾತದಿಂದ ಸೋಮವಾರ ರಾತ್ರಿ ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ಸಂಜೆ ನೆರವೇರಿತು.

## ಜೆಇಇ ಅಡ್ವಾನ್ಸ್: ತನೀಶ್ ಚಂದ್ರ ಜಿಲ್ಲೆಗೆ ಪ್ರಥಮ

• ಪ್ರಜೋದಯ ವರದಿ




**ಹಾಸನ:** ಜೆಇಇ ಅಡ್ವಾನ್ಸ್ ಪರೀಕ್ಷೆ ಫಲಿತಾಂಶದಲ್ಲಿ ವಿದ್ಯಾರ್ಥಿ ಪಿ. ತನೀಶ್ ಚಂದ್ರ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ ಎಂದು ವಿದ್ಯಾರ್ಥಿ ತಂದೆ ಡಾ|| ಪಾಲಚಂದ್ರ ಎಂದು ಸಂತಸ ಹಂಚಿಕೊಂಡರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಪೋದಾರ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಪ್ರೌಢ ಶಿಕ್ಷಣ ಪಡೆದು, ಬೆಂಗಳೂರಿನ ಅಲೆನ್ ಕೆರಿಯಲ್ ಶಾಲೆಯಲ್ಲಿ ಪಿಯುಸಿ ಮುಗಿಸಿ ಇದೀಗ ಜಿಲ್ಲೆಗೆ ಕೀರ್ತಿ ತಂದಿದ್ದಾನೆಂದರು.

ನಾನು ಹಿಮ್ಸ್‌ನಲ್ಲಿ ವೈದ್ಯನಾಗಿದ್ದು, ಪತ್ನಿ ಡಾ.ಸಿ.ವೈ.ಶ್ರೀಲತಾ ಅವರು, ಸಮುದಾಯ ವೈದ್ಯಕೀಯ ವಿಭಾಗದ ಸಹ-ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಗ ನಮ್ಮಂತೆಯೇ ವೈದ್ಯರಾಗಬೇಕೆಂಬ ಆಸೆಯಿತ್ತು. ಆತ ಬೇರೆ ಓದುವೆ ಎಂದು ಐಐಟಿಗಳಿಗೆ ಪ್ರವೇಶ ನಡೆಯುವ ಅತ್ಯಂತ ಕಠಿಣ ಪರೀಕ್ಷೆಯಾದ ಜೆಇಇ ಅಡ್ವಾನ್ಸ್‌ನಲ್ಲಿ ಮೇರು ಸಾಧನೆ ಮಾಡಿರುವುದು ನಮಗೆ ಸಂತೋಷ ತಂದಿದೆ ಎಂದು ಹೇಳಿದರು.

ತಾಯಿ ಡಾ||ಶ್ರೀಲತಾ ಅವರು ಮಾತನಾಡಿ, ಬಾಲ್ಯದಿಂದಲೇ ಮಗ ಓದಿ ನಲ್ಲಿ ಏಕಾಗ್ರತೆ ತೋರುತ್ತಿದ್ದ. ವಿಶೇಷವಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅಪಾರ ಆಸಕ್ತಿ ಹಾಗು ಪ್ರಾವೀಣ್ಯತೆ ತೋರಿದ್ದ. ಆಕಾಶ್ ಬೈಜೂಸ್ ಒಲಂಪಿ ಯಾಡ್ ಪರೀಕ್ಷೆಗಳಲ್ಲೂ ಉತ್ತಮ ಪ್ರದರ್ಶನ ತೋರಿದ್ದ. ನಿರಂತರ ಓದು, ಎರಡು ವರ್ಷಗಳ ಕಾಲ ಕಠಿಣ ಪರಿಶ್ರಮ, ಮಾದರಿ ಪರೀಕ್ಷೆಗಳು ಮತ್ತು ವಿಷಯವಾರು ವಿಶ್ಲೇಷ ಣೆಗಳ ಮೂಲಕ ಯಶಸ್ಸಿನ ಹಾದಿ ನಿರ್ಮಿಸಿ ಕೊಂಡಿದ್ದಾನೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿ ತನೀಶ್ ಚಂದ್ರ ಅವರು ಮಾತನಾಡಿ, ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವುದು ನನ್ನ ಬಹುದಿನಗಳ ಕನಸಾಗಿತ್ತು. ಆ ಶ್ರಮಕ್ಕೆ ಫಲ ಸಿಕ್ಕಿದೆ. ಪ್ರತಿದಿನ ಕಲಿತ ವಿಷಯ ಪುನರಾವರ್ತನೆ ಮಾಡುವುದು, ಮಾಕ್ ಟೆಸ್ಟ್‌ಗಳನ್ನು ಬರೆಯುವುದು ಹಾಗು ತಪ್ಪುಗಳನ್ನು ವಿಶ್ಲೇಷಿಸುವುದಕ್ಕೆ ಹೆಚ್ಚು ಸಮಯ ನೀಡಿದ್ದೆ. ಶಿಕ್ಷಕರ ಮಾರ್ಗದರ್ಶನ ಮತ್ತು ಪೋಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಹೇಳಿದರು.

## ಸಂತೋಷ್ ಲಾಡ್‌ಗೆ ಸಚಿವ ಸ್ಥಾನ ನೀಡಲು ಮನವಿ

• ಪ್ರಜೋದಯ ವರದಿ




**ಹಾಸನ:** ನಿಕಟಪೂರ್ವ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಮಹತ್ವದ ಸ್ಥಾನ ನೀಡಬೇಕೆಂದು ಸಂತೋಷ್ ಲಾಡ್ ಅಭಿಮಾನಿಗಳ ಬಳಗದ ವಿನೋದ್ ಕುಮಾರ್ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕಾರ್ಮಿಕ ಸಚಿವರಾಗಿ ಕಾರ್ಯನಿರ್ವಹಿಸಿದ ಸಂತೋಷ್ ಲಾಡ್, ಕಾರ್ಮಿಕರ ಕಲ್ಯಾಣಕ್ಕಾಗಿ ಹಲವು ಐತಿಹಾಸಿಕ ಕ್ರಮ ಜಾರಿಗೆ ತಂದಿದ್ದಾರೆ. ಮಹಿಳಾ ಕಾರ್ಮಿಕರಿಗಾಗಿ ಋತುಚಕ್ರ ರಜೆ, ಕಾರ್ಮಿಕರಿಗೆ ಅಪಘಾತ ವಿಮೆ, ವೇತನ ಹೆಚ್ಚಳ, ಕಾರ್ಮಿಕ ಸ್ಮಾರ್ಟ್ ಕಾರ್ಡ್ ಯೋಜನೆ, ನಿರಾಶ್ರಿತ ಹಾಗು ವಿಧವಾ ಅಸಂಘಟಿತ ಮಹಿಳಾ ಕಾರ್ಮಿಕರ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಸೇರಿ ಹಲವು ಜನಪರ ಯೋಜನೆ ಜಾರಿಗೆ ತಂದಿರುವುದು ಅವರ ವಿಶೇಷ ಸಾಧನೆಯಾಗಿದೆ ಎಂದು ಹೇಳಿದರು.

ಉತ್ತರಾಖಂಡ ಹಾಗೂ ಕೇರಳ ಪ್ರವಾಹ, ಒಡಿಶಾದ ರೈಲು ದುರಂತ, ಪಹಲ್ಗಾಮ್ ಉಗ್ರರ ದಾಳಿ ಸೇರಿ ವಿವಿಧ ಸಂಕಷ್ಟದ ಸಂದರ್ಭಗಳಲ್ಲಿ ಸ್ಥಳಕ್ಕೆ ತೆರಳಿ ಸಿಲುಕಿದ್ದ ಕನ್ನಡಿಗರನ್ನು ರಕ್ಷಿಸಿ ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರುವ ಮೂಲಕ ಮಾನವೀಯತೆ ಮೆರೆದಿದ್ದಾರೆಂದು ಶ್ಲಾಘಿಸಿದರು.

ಕೇಂದ್ರ ಸರ್ಕಾರದ ನೀತಿಗಳ ನ್ಯೂನತೆಗಳನ್ನು ಧೈರ್ಯವಾಗಿ ಪ್ರಶ್ನಿಸಿರುವ ಸಂತೋಷ್ ಲಾಡ್ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಪಕ್ಷಕ್ಕೆ ಮತ್ತಷ್ಟು ಬಲ ದೊರೆಯಲಿದ್ದು, 2028ರ ಚುನಾವಣೆಯಲ್ಲಿಯೂ ಕಾಂಗ್ರೆಸ್‌ಗೆ ಅನುಕೂಲವಾಗಲಿದೆ ಎಂದರು.

ಮುಖಂಡರಾದ ಹರೀಶ್, ಇಮ್ರಾನ್ ಖಾನ್, ಮೊಹಮ್ಮದ್ ಇರ್ಫಾನ್, ಅಫ್ರೋಜ್ ಹಾಗೂ ರಾಜು ಉಪಸ್ಥಿತರಿದ್ದರು.

## ಸತ್ತು ತೇಲುತ್ತಿರುವ ಬನ್ನೂರು ಕೆರೆ ಮೀನುಗಳು

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ಬನ್ನೂರು ಗ್ರಾಮದ ದೊಡ್ಡಕೆರೆಯಲ್ಲಿ ಸಾವಿರಾರು ಮೀನುಗಳು ಸಾವನ್ನಪ್ಪಿದ್ದು, ಮೀನು ಸಾಕಾಣಿಕೆದಾರರಿಗೆ ನಷ್ಟ ಉಂಟಾಗಿದೆ.

ವಡೆನೂರು ಗ್ರಾಮದ ಶಿವಣ್ಣ ಅವರು ಕೆರೆಯನ್ನು ಗುತ್ತಿಗೆ ಪಡೆದು ಮೀನು ಸಾಕಾಣಿಕೆ ಮಾಡುತ್ತಿದ್ದರು. ಒಂದು ಮೀನಿನ ಮರಿಯನ್ನು 3 ರೂ.ನಂತೆ ಖರೀದಿಸಿ ಸುಮಾರು ಒಂದು ಲಕ್ಷ ಮೀನು ಮರಿಗಳನ್ನು ಕೆರೆಗೆ ಬಿಟ್ಟಿದ್ದರು. ಒಂದರಿಂದ ಒಂದೂವರೆ ಕೆ.ಜಿ. ತೂಕದ ಸಾವಿರಾರು ಮೀನುಗಳು ಏಕಾಏಕಿ ಸಾವನ್ನಪ್ಪಿರುವುದು ಆತಂಕಕ್ಕೆ ಕಾರಣವಾಗಿದೆ.

ಕೆರೆಯಲ್ಲಿ ವಿಷಕಾರಿ ವಸ್ತು ಬೆರೆಸಿರುವ ಸಾಧ್ಯತೆ ಅಥವಾ ನೀರಿನ ಮಟ್ಟ ಕುಸಿದು ಆಮ್ಲಜನಕದ ಕೊರತೆ ಉಂಟಾಗಿರುವ ಕಾರಣ ಮೀನುಗಳು ಸಾವನ್ನಪ್ಪಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಮೀನುಗಳ ಸಾವಿಗೆ ನಿಖರ ಕಾರಣ ಏನೆಂಬುದು ತಿಳಿದು ಬಂದಿಲ್ಲ.

## ಆತ್ಮಾಹುತಿ ಬಾಂಬ್ ದಾಳಿ ವಿಫಲ : ನಾಲ್ವರು ಉಗ್ರರ ಹತ್ಯೆ

• ಪ್ರಜೋದಯ ವರದಿ



**ಪೇಶಾವರ:** ಪಾಕಿಸ್ತಾನದ ಸೇನಾ ಚೆಕ್‌ಪೋಸ್ಟ್ ವೊಂದರ ಮೇಲಿನ ಆತ್ಮಾಹುತಿ ಬಾಂಬ್ ದಾಳಿ ಯತ್ನವನ್ನು ಭದ್ರತಾ ಪಡೆಗಳು ಮಂಗಳವಾರ ವಿಫಲಗೊಳಿಸಿ, ನಾಲ್ವರು ತಾಲಿಬಾನ್ ಉಗ್ರರನ್ನು ಹತ್ಯೆ ಮಾಡಿವೆ.

ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮಿರನ್‌ಶಾ ಪೋಸ್ಟ್ ಬಳಿ ಇರುವ ಚೆಕ್‌ಪೋಸ್ಟ್‌ಗೆ ಸ್ಫೋಟಕ ತುಂಬಿದ್ದ ವಾಹನದ ಮೂಲಕ ದಾಳಿ ನಡೆಸಲು ತೆಹ್ರಿಕ್ ಎತಾಲಿಬಾನ್ ಭಯೋತ್ಪಾದಕರು ಯತ್ನಿಸಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಗುರಿಯನ್ನು ತಲುಪುವ ಮೊದಲೇ ಭದ್ರತಾ ಸಿಬ್ಬಂದಿ ವಾಹನವನ್ನು ನಾಶ ಮಾಡಿದ್ದಾರೆ. ನಾಲ್ವರು ಉಗ್ರರನ್ನು ಹತ್ಯೆ ಮಾಡಿದ್ದಾರೆಂದು ಹೇಳಿದ್ದಾರೆ. ಪ್ರತ್ಯೇಕ ಘಟನೆವೊಂದರಲ್ಲಿ, ಅಸ್ಲಾಂ ಪ್ಯಾಕೆಟ್ ಬಳಿ ಸ್ಫೋಟ ಸಂಭವಿಸಿದೆ. ಸ್ಫೋಟದ ಪ್ರಮಾಣ ತೀವ್ರವಾಗಿತ್ತು.

## ಇಂದಿನಿಂದ ಬ್ರಿಕ್ 2ನೇ ತಾಂತ್ರಿಕ ಸಭೆ

• ಪ್ರಜೋದಯ ವರದಿ

**ಭುವನೇಶ್ವರ:** ಒಡಿಶಾದ ಪುರಿಯಲ್ಲಿ ಜೂನ್ 3ರಿಂದ 5ರ ವರೆಗೆ ನಡೆಯಲಿರುವ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ವಿಪತ್ತು ಅಪಾಯ ತಗ್ಗಿಸುವ ಕುರಿತ ಎರಡನೇ ತಾಂತ್ರಿಕ ಸಭೆಯಲ್ಲಿ 11 ರಾಷ್ಟ್ರಗಳ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ.

ವಿಪತ್ತು ಸಂದರ್ಭಗಳನ್ನು ಎದುರಿಸಲು ಕೈಗೊಂಡಿರುವ ಸಿದ್ಧತೆ, ಪರಿಣಾಮಕಾರಿ ಚಂಡ ಮಾರುತ ನಿರ್ವಹಣೆ, ಮುನ್ಸೂಚನಾ ವ್ಯವಸ್ಥೆಯಲ್ಲಿ ಒಡಿಶಾ ಜಾಗತಿಕವಾಗಿ ಜನಪ್ರಿಯತೆ ಪಡೆದಿರುವುದರಿಂದ ರಾಜ್ಯವು ಸಮಾವೇಶದ ಆತಿಥ್ಯವನ್ನು ವಹಿಸಿದೆ ಎಂದು ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ತಿಳಿಸಿದ್ದಾರೆ.

ಭಾರತ, ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಸೌದಿ ಅರೇಬಿಯಾ, ಈಜಿಪ್ಟ್, ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಇಥಿಯೋಪಿಯಾ, ಇರಾನ್, ಇಂಡೋನೇಷ್ಯಾ ದೇಶದ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆಂದು ತಿಳಿಸಿದ್ದಾರೆ. ವಿಪತ್ತು ಅಪಾಯ ತಗ್ಗಿಸುವ ಕುರಿತ ಮೊದಲ ತಾಂತ್ರಿಕ ಸಭೆಯು ಏಪ್ರಿಲ್ 29 ಮತ್ತು 30ರಂದು ವರ್ಚುವಲ್ ಆಗಿ ನಡೆದಿತ್ತು.

## ಪತ್ತೆಗೆ ನೆರವಾಗಲು ಮನವಿ

• ಪ್ರಜೋದಯ ವರದಿ

**ಹಾಸನ:** ಚಿತ್ರದುರ್ಗದಲ್ಲಿ ನಡೆದ ಯಡಿಯೂರಪ್ಪ ಸಂಭ್ರಮೋತ್ಸವ ಕಾರ್ಯಕ್ರಮಕ್ಕೆ ಹೋಗಿದ್ದ ಬೇಲೂರು ತಾಲ್ಲೂಕು ಅಡಗೂರು ಗ್ರಾಮದ ಚಂದ್ರಯ್ಯ (65) ಅವರು ಕಾಣೆಯಾ ಗಿದ್ದಾರೆ. ಹುಡುಕಿ ಕೊಡಲು ನೆರವಾಗುವಂತೆ ಕುಟುಂಬ ಸದಸ್ಯರು ಮನವಿ ಮಾಡಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಕೀಲ ಮಂಜುನಾಥ್, ಚಂದ್ರಯ್ಯ ಅವರು ಕಾಣೆಯಾದ ನಂತರ ಅನೇಕ ಕಡೆ ಹುಡುಕಾಡಿದರೂ ಸುಳಿವು ಪತ್ತೆಯಾಗಿಲ್ಲ. ನಾಪತ್ತೆಯಾದ ಬಳಿಕ ಕುಟುಂಬ ಸದಸ್ಯರು ಚಿತ್ರದುರ್ಗಕ್ಕೆ ಹೋಗಿ ಹುಡುಕಾಡಿದರೂ ಸುಳಿವು ಸಿಕ್ಕಿಲ್ಲ. ಈ ಸಂಬಂಧ ಮೊದಲು ಚಿತ್ರದುರ್ಗ ಠಾಣೆಗೆ ನಂತರ ಹಳೇಬೀಡು ಠಾಣೆಗೆ ದೂರು ನೀಡಿದ್ದರೂ ಪ್ರಯೋಜನ ಆಗಿಲ್ಲ ಎಂದರು.

ಚಂದ್ರಯ್ಯ ಅವರು ಸುಮಾರು 5.5 ಅಡಿ ಎತ್ತರವಿದ್ದು, ಸಂಬಂಧಿಕರು ಹಾಗು ಕುಟುಂಬ ಸದಸ್ಯರು ವಿವಿಧ ಕಡೆಗಳಲ್ಲಿ ಹುಡುಕಾಟ ನಡೆಸಿದರೂ ಅವರು ಕಂಡು ಬಂದಿಲ್ಲ. ಇನ್ನಾದರೂ ಚಂದ್ರಯ್ಯ ಅವರ ಸುಳಿವು ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ಅಥವಾ 8431580076, 7406321355 ಹಾಗೂ 7338517741 ಈ ನಂಬರ್‌ಗಳನ್ನು ಸಂಪರ್ಕಿಸುವಂತೆ ಮನವಿ ಮಾಡಿದರು. ಪುತ್ರ ಮಂಜುನಾಥ್, ಜವರಯ್ಯ, ಕುಮಾರ್ ಇದ್ದರು.

## ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಪಟ್ಟಿಯಲ್ಲಿದ್ದ ಶಾಲೆಗಳು ಯಥಾಸ್ಥಿತಿ
# ಎಐಡಿಎಸ್‌ಒ ಹೋರಾಟದ ಫಲವಾಗಿ ಶಾಲೆಗಳ ಉಳಿವು

• ಪ್ರಜೋದಯ ವರದಿ




**ಹಾಸನ:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಕೆಪಿಎಸ್ ಶಾಲೆಗಳೊಂದಿಗೆ ವಿಲೀನಗೊಳಿಸಲು ಗುರುತಿಸಲಾಗಿದ್ದ ಹಲವು ಸರ್ಕಾರಿ ಶಾಲೆಗಳು ಹೋರಾಟದ ಫಲವಾಗಿ ಯಥಾಸ್ಥಿತಿಯಲ್ಲಿ ಮುಂದುವರಿದಿದ್ದು, ಶಾಲಾರಂಭದ ಮೊದಲ ದಿನ ಈ ಶಾಲೆಗಳಲ್ಲಿ ಮಕ್ಕಳ ಕಲರವ ಮತ್ತೆ ಮೊಳಗಿತು.

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ನಿಟ್ಟೂರು, ಗೊರೂರು, ಕಾಮತಿಕೂಡಿಗೆ, ಡಿ.ಎಂ. ಕುರ್ಕೆ, ಜಾವಗಲ್, ಬಾಣಾವಾರ, ಚಿಂದೇನ ಹಳ್ಳಿ ಗೇಟ್ ಹಾಗೂ ಕುರುವಂಕ ಪ್ರದೇಶಗಳ ಕೆಪಿಎಸ್ ಶಾಲೆಗಳೊಂದಿಗೆ ಸುತ್ತಮುತ್ತಲಿನ 80ಕ್ಕೂ ಹೆಚ್ಚು ಶಾಲೆಗಳನ್ನು ವಿಲೀನಗೊಳಿಸುವ ಪ್ರಸ್ತಾವನೆಯನ್ನು ಸರ್ಕಾರ ಪ್ರಕಟಿಸಿತ್ತು.

ಈ ಪಟ್ಟಿಯಲ್ಲಿ ಕೆರೆಕೋಡಿಹಳ್ಳಿ, ಧನಂಜಯಪುರ, ಲಿಂಗಲಾಪುರ, ಬಂದೂರು, ಸಿಂಗಟಗೆರೆ, ಹೊಸೂರು, ಹಂಗರಹಳ್ಳಿ, ರಂಗೇನಹಳ್ಳಿ, ಗೊರೂರು ಜಲಾಶಯ, ತ್ಯಾಗಟೂರು, ದೇವರಾಜಪುರ, ಅಜ್ಜೇನಹಳ್ಳಿ, ಕೆಂಕೆರೆ, ಚಿಕ್ಕಣ್ಣನ ಕೊಪ್ಪಲು, ಬಾಗಿಲಘಟ್ಟ, ಕೊಮ್ಮಾರಘಟ್ಟ, ಮರಟಗೆರೆ, ಕೆ.ಬಿ.ತಾಂಡ್ಯ, ಹರಳಕಟ್ಟೆ, ಮಾಡಾಳು, ಹೆಚ್.ಎಲ್.ಬಿ. ತಾಂಡ್ಯ, ಬ್ರಹ್ಮದೇವರಹಳ್ಳಿ ಹಾಗು ನಾಗೇನಹಳ್ಳಿ ಸೇರಿ ಹಲವು ಶಾಲೆಗಳು ಸೇರಿದ್ದವು. ಅದರಿಂದ ಈ ಶಾಲೆಗಳ ಅಸ್ತಿತ್ವದ ಪ್ರಶ್ನೆ ಎದುರಾಗಿತ್ತು.

ಸರ್ಕಾರದ ಆದೇಶದ ವಿರುದ್ಧ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ಹಾಗು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ನೇತೃತ್ವದಲ್ಲಿ ಸ್ಥಳೀಯರು ಕಳೆದ ಆರು ತಿಂಗಳಿಂದ ನಿರಂತರ ಹೋರಾಟ ನಡೆಸಿದ್ದರು. ಅದರ ಪರಿಣಾಮವಾಗಿ ಶಾಲೆಗಳು ಸದ್ಯ ಯಥಾಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಹೋರಾಟದಿಂದಾಗಿ ಶಾಲೆಗಳು ಉಳಿದಿವೆ. ಶಾಲೆಗಳ ವಿಲೀನವನ್ನು ತಡೆಯುವುದರ ಜೊತೆಗೆ ಅವುಗಳನ್ನು ಮತ್ತಷ್ಟು ಬಲಪಡಿಸುವ ನಮ್ಮ ಸಂಘಟಿತ ಪ್ರಯತ್ನ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ.

ಶಾಲೆಗಳಿಗೆ ಎಐಡಿಎಸ್‌ಒ ಜಿಲ್ಲಾ ಅಧ್ಯಕ್ಷೆ ಚೈತ್ರ, ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಜಿಲ್ಲಾ ಉಪಾಧ್ಯಕ್ಷ ಅಭಿಷೇಕ್ ಸೇರಿ ಪದಾಧಿಕಾರಿಗಳು ಭೇಟಿ ನೀಡಿ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ಸಂವಾದ ನಡೆಸಿದ ಅವರು, ಸರ್ಕಾರಿ ಶಾಲೆಗಳ ಉಳಿವಿನ ಕುರಿತು ಜಾಗೃತಿ ಮೂಡಿಸುವ ಪೋಸ್ಟರ್‌ಗಳನ್ನು ಪ್ರದರ್ಶಿಸಿದರು.

# ಕೋಳಿ ಬೆಳೆಗಾರರಿಗೆ ಕೆ.ಜಿ.ಗೆ 10 ರೂ. ಸಾಕಾಣಿಕೆ ದರ
## ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಸ್ವಾಗತ

• ಪ್ರಜೋದಯ ವರದಿ



**ಹಾಸನ:** ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವ ರಾಜ್ಯದ ರೈತರಿಗೆ ತಾತ್ಕಾಲಿಕವಾಗಿ ಕನಿಷ್ಠ ಕೆಜಿಗೆ 10 ರೂ. ಸಾಕಾಣಿಕೆ ದರ ನಿಗದಿ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿರುವುದು ಕೋಳಿ ಸಾಕಾಣಿಕೆ ರೈತರ ಹೋರಾಟಕ್ಕೆ ದೊರೆತ ಮಹತ್ವದ ಜಯವಾಗಿದೆ ಎಂದು ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಅವರು ತಿಳಿಸಿದ್ದಾರೆ.

ರಾಜ್ಯದ ಸಾವಿರಾರು ಕೋಳಿ ಸಾಕಾಣಿಕೆ ರೈತರು ಕಳೆದ ಹತ್ತು ವರ್ಷಗಳಿಂದ ನಷ್ಟದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು. ಕೋಳಿ ಮಾರಾಟ ಕಂಪನಿಗಳು ರೈತರಿಗೆ ಕೆ.ಜಿ.ಗೆ ಕೇವಲ 6.25 ಪೈಸೆ ಸಾಕಾಣಿಕೆ ದರ ನೀಡು ತ್ತಿದ್ದು, ಅದರಿಂದ ರೈತರಿಗೆ ಸಾಕಾಣಿಕೆ ವೆಚ್ಚವೂ ವಾಪಾಸ್ ಸಿಗದೆ ಪರಿಸ್ಥಿತಿ ದುಸ್ತರವಾಗಿತ್ತು ಎಂದು ಬೇಸರಸಿದರು. ಕೋಳಿ ಸಾಕಾಣಿಕೆಗೆ, ಔಷಧ, ವಿದ್ಯುತ್, ಕಾರ್ಮಿಕ ವೆಚ್ಚ ಸೇರಿ ವಿವಿಧ ಖರ್ಚುಗಳು ಹೆಚ್ಚಾಗಿ ರುವ ಹಿನ್ನಲೆ ಕನಿಷ್ಠ ಕೆ.ಜಿ.ಗೆ 20 ರೂ. ನಿಗದಿ ಮಾಡಬೇಕೆಂದು ರಾಜ್ಯ ಪಶುಪಾಲನಾ ಇಲಾಖೆ ಹಾಗು ಸರ್ಕಾರಕ್ಕೆ ನಿರಂತರ ಮನವಿ ಸಲ್ಲಿಸಲಾ ಗಿತ್ತು ಎಂದರು.

ರೈತರ ಮನವಿಗೆ ಸ್ಪಂದಿಸಿದ ರಾಜ್ಯ ಪಶುಸಂಗೋಪನಾ ಇಲಾಖೆ ಆಯುಕ್ತರಾದ ಶಿಲ್ಪಾ ನಾಗ್ ಹಾಗು ಇತರೆ ಅಧಿಕಾರಿಗಳ ತಂಡವು ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಸಂಘದ ಪದಾಧಿಕಾರಿಗಳು ಮತ್ತು ಕೋಳಿ ಮಾರಾಟ ಕಂಪನಿಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ರೈತರ ಅಹವಾಲುಗಳನ್ನು ಆಲಿಸಿತು ಎಂದು ತಿಳಿಸಿದರು.

ಸಭೆಯಲ್ಲಿ ರೈತರು, ಕಂಪನಿಗಳ ಪ್ರತಿನಿಧಿಗಳು ಹಾಗೂ ಅಧಿಕಾರಿಗ ಳನ್ನು ಒಳಗೊಂಡ ತಾಂತ್ರಿಕ ನಿರ್ವ ಹಣಾ ಸಮಿತಿಯನ್ನು ರಚಿಸಲಾಗಿದ್ದು, ಕೋಳಿ ಸಾಕಾಣಿಕೆಗೆ ತಗಲುವ ಒಟ್ಟು ವೆಚ್ಚದ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಸಮಿತಿಯ ವರದಿ ಬರುವವರೆಗೂ ರಾಜ್ಯದ ಎಲ್ಲಾ ಕೋಳಿ ಮಾರಾಟ ಕಂಪನಿಗಳು ರೈತರಿಗೆ ತಾತ್ಕಾಲಿಕವಾಗಿ ಕನಿಷ್ಠ ಕೆ.ಜಿ.ಗೆ 10 ರೂ. ಸಾಕಾಣಿಕೆದರ ನೀಡಬೇಕೆಂದು ಸರ್ಕಾರ ಆದೇಶಿಸಿರುವುದಾಗಿ ಹೇಳಿದರು.

ರಾಜ್ಯ ಕೋಳಿ ಸಾಕಾಣಿಕೆ ರೈತರ ಸಂಘ ಕಳೆದ ಐದು ತಿಂಗಳಿಂದ ಹೋರಾಟ ನಡೆಸುತ್ತಿದ್ದು, ಅದರ ಫಲವಾಗಿ ಸರ್ಕಾರ ರೈತರ ಬೇಡಿಕೆಗೆ ಸ್ಪಂದಿಸಿದೆ. ಇದು ರಾಜ್ಯದ ಲಕ್ಷಾಂತರ ಕೋಳಿ ಸಾಕಾಣಿಕೆ ರೈತರ ಮೊದಲ ಹಂತದ ವಿಜಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ವೈಜ್ಞಾನಿಕವಾಗಿ ಲಾಭಾಂಶ ಸೇರಿಸಿ ಕೋಳಿ ಸಾಕಾಣಿಕೆ ದರ ನಿಗದಿ ಮಾಡಬೇಕು. ಜೊತೆಗೆ ಕೋಳಿ ಸಾಕಾಣಿಕೆ ರೈತರಿಗೆ ಕಡಿಮೆ ಬಡ್ಡಿದರದಲ್ಲಿ 25 ಲಕ್ಷದವರೆಗೆ ಸಾಲ ಹಾಗು ಸಹಾಯಧನ ಸೌಲಭ್ಯ ಒದ ಗಿಸಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದುವರಿಸಲಾಗುವುದೆಂದು ಹೇಳಿದರು.

## ರಾಜಣ್ಣ, ಸತೀಶ್ ಜಾರಕಿಹೊಳಿಗೆ ಸಚಿವ ಸ್ಥಾನ ನೀಡಲು ಒತ್ತಾಯ

• ಪ್ರಜೋದಯ ವರದಿ



**ಹಾಸನ:** ನೂತನ ಸಚಿವ ಸಂಪುಟದಲ್ಲಿ ವಾಲ್ಮೀಕಿ ನಾಯಕ ಸಮುದಾಯದ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರಿಗೆ ಸಚಿವ ಸ್ಥಾನ ಹಾಗು ಸತೀಶ್ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜೊತೆಗೆ ಪ್ರಬಲ ಖಾತೆ ನೀಡಬೇಕೆಂದು ಜಿಲ್ಲಾ ವಾಲ್ಮೀಕಿ ಸಮಾಜ ಒತ್ತಾಯಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಸಮಾಜದ ಜಿಲ್ಲಾಧ್ಯಕ್ಷ ಮಧು ನಾಯಕ, ಪ್ರಧಾನ ಕಾರ್ಯದರ್ಶಿ ಬ್ರಹ್ಮದೇವರಹಳ್ಳಿ ಶಿವಪ್ಪನಾಯಕ ಹಾಗೂ ಗೌರವ ಅಧ್ಯಕ್ಷ ಧರ್ಮಪ್ಪ ನಾಯಕ, ಈ ಇಬ್ಬರು ನಾಯಕರಿಗೆ ಅವಕಾಶ ನೀಡಿದರೆ ಪಕ್ಷಕ್ಕೆ ಹಾಗು ಸಮುದಾಯಕ್ಕೂ ಅನುಕೂಲವಾಗಲಿದೆ ಎಂದಿದ್ದಾರೆ.

ಸತೀಶ್ ಜಾರಕಿಹೊಳಿ ಅವರು ರಾಜ್ಯದ ಪ್ರಶ್ನಾತೀತ ನಾಯಕರು, ಆಹಿಂದ ಮತ್ತು ಶೋಷಿತ ಸಮುದಾಯಗಳ ಪರವಾಗಿ ಸುಮಾರು 30 ವರ್ಷಗಳಿಂದ ನಿರಂತರವಾಗಿ ಕೆಲಸ ನಿರ್ವಹಿಸಿ ಕೊಂಡು ಬಂದಿದ್ದಾರೆ. ಅವರು ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗದೆ, ಸಾಮಾಜಿಕವಾಗಿಯೂ ಉತ್ತಮ ಸೇವೆ ಮಾಡುತ್ತಿದ್ದಾರೆ. ತಮ್ಮ ಸ್ವಂತ ಹಣದಿಂದ ಹಲವಾರು ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಿ ವಿವಿಧ ರೀತಿಯ ತರಬೇತಿ ನೀಡುವ ಮೂಲಕ ಯುವಕರು, ಮಹಿಳೆಯರನ್ನು ಸ್ವಾವಲಂಬಿಗಳಾಗಿ ಮಾಡುತ್ತಿದ್ದಾರೆ. ರಾಜ್ಯದಲ್ಲಿ ನಿರಂತರವಾಗಿ ಬುದ್ಧ, ಬಸವ, ಅಂಬೇಡ್ಕರ್ ಅನುಯಾಯಿಯಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದು, ರಾಜ್ಯದ ಆಹಿಂದ ವರ್ಗದ ಏಕೈಕ ನಾಯಕ ಸತೀಶ್ ಜಾರಕಿಹೊಳಿ ಎಂದು ತಿಳಿಸಿದ್ದಾರೆ.

2023ರ ಸಾರ್ವತ್ರಿಕ ಚುನಾವಣೆಯಲ್ಲಿ ಮೀಸಲು ಕ್ಷೇತ್ರದಿಂದ 14 ಶಾಸಕರು, ಸಾಮಾನ್ಯ ಕ್ಷೇತ್ರದಲ್ಲಿಯೂ ಒಬ್ಬರೂ ಹಾಗು 3 ಲೋಕಸಭಾ ಕ್ಷೇತ್ರದಲ್ಲಿ ನಾಯಕ ಸಮುದಾಯದವರು ಗೆಲ್ಲಲು ಸತೀಶ್ ಜಾರಕಿಹೊಳಿ ಅವರು ಪ್ರಮುಖ ಕಾರಣಕರ್ತರಾಗಿದ್ದಾರೆ. ಜೊತೆಗೆ ಬಾಗಲ ಕೋಟೆ ಹಾಗು ಶಿಗ್ಗಾವಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಶ್ರಮವಹಿಸಿ ದ್ದಾರೆ. ನಿರಂತರವಾಗಿ ಶೋಷಿತ ಸಮುದಾಯಗಳ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಸತೀಶ್ ಜಾರಕಿಹೊಳಿ ಅವರಿಗೆ ಕೆ.ಪಿ.ಸಿ.ಸಿ. ಅಧ್ಯಕ್ಷ ಸ್ಥಾನ ಹಾಗು ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ ನಮ್ಮ ಸಮುದಾಯ ಇನ್ನೂ ಹೆಚ್ಚಿನ ರೀತಿಯಲ್ಲಿ ಸತೀಶ್ ಜಾರಕಿಹೊಳಿ ಅವರನ್ನು ಬೆಂಬಲಿಸಲು ಅನುಕೂಲವಾಗುತ್ತದೆಂದರು.

ಮಧುಗಿರಿ ಶಾಸಕ ಕೆ.ಎನ್. ರಾಜಣ್ಣ ಅವರನ್ನೂ ಮತ್ತೆ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು. ಅದರಿಂದ ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಪ್ರಬಲವಾಗಲು ಅನುಕೂಲವಾಗಲಿದೆ. ಪಕ್ಷ ಎಲ್ಲಾ ಸಮುದಾಯದಗಳ ಪರವಾಗಿದೆ ಎಂಬು ದನ್ನು ಸಾಬೀತು ಮಾಡಲು ರಾಜಣ್ಣ, ಸತೀಶ್ ಜಾರಕಿಹೊಳಿ ಸೇರಿ ಅವಕಾಶವಿರುವ ಕಡೆ ನಮ್ಮ ಸಮುದಾಯದ ಶಾಸಕರನ್ನು ಮಂತ್ರಿ ಮಾಡಬೇಕೆಂದು ಮನವಿ ಮಾಡಿದ್ದಾರೆ.

# ಹಳೆ ವೈಷಮ್ಯ : ದಲಿತನ ಮೇಲೆ ಹಲ್ಲೆ

• ಪ್ರಜೋದಯ ವರದಿ






**ಸಕಲೇಶಪುರ:** ಹಳೆ ದ್ವೇಷದ ಹಿನ್ನಲೆ ದಲಿತ ಸಮುದಾಯದ ವ್ಯಕ್ತಿಯೊಬ್ಬರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದ್ದಲ್ಲದೆ, ಮನೆಗೆ ಬೆಂಕಿ ಹಚ್ಚಿರುವ ಘಟನೆ ತಾಲ್ಲೂಕಿನ ಯಸಳೂರು ಹೋಬಳಿಯ ಮಂದಳ್ಳಿ ಗ್ರಾಮದಲ್ಲಿ ನಡೆದಿದೆ.

ಮಂದಳ್ಳಿ ಗ್ರಾಮದ ದೇವರಾಜು (50) ಹಲ್ಲೆಗೊಳಗಾದ ವ್ಯಕ್ತಿ. ಅದೇ ಗ್ರಾಮದ ವೆಂಕಟೇಶ್ ಶೆಟ್ಟಿ (70) ಹಲ್ಲೆ ನಡೆಸಿದ ಆರೋಪಿ. ಈ ಘಟನೆಯನ್ನು ಖಂಡಿಸಿ ದಲಿತ ಸಂಘಟನೆಗಳ ಮುಖಂಡರು ಯಸಳೂರು ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ್ದು, ಆರೋಪಿಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

**ಘಟನೆಯ ಹಿನ್ನಲೆ**

ದೇವರಾಜು ಅವರ ಅಳಿಯನ ಬೈಕ್‌ನ್ನು ಅದೇ ಗ್ರಾಮದ ವೆಂಕಟೇಶ್ ಶೆಟ್ಟಿ ಎಂಬಾತ ವಿನಾಕಾರಣ ಕಾಡಿನೊಳಗೆ ತಳ್ಳಿಬಿಟ್ಟಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಯಸಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ನಂತರ ಗ್ರಾಮಸ್ಥರು ರಾಜಿ ಪಂಚಾಯಿತಿ ನಡೆಸಿ, ವೆಂಕಟೇಶ್ ಶೆಟ್ಟಿಗೆ 6 ಸಾವಿರ ದಂಡ ವಿಧಿಸುವ ಮೂಲಕ ಪ್ರಕರಣವನ್ನು ಇತ್ಯರ್ಥಗೊಳಿಸಿದ್ದರು. ಆದರೆ, ಈ ಘಟನೆಯಿಂದ ಆರೋಪಿ ದ್ವೇಷ ಸಾಧಿಸುತ್ತಿದ್ದ ಎಂದು ಆರೋಪಿಸಲಾಗಿದೆ.

**ಜಾತಿ ನಿಂದನೆ ಆರೋಪ**

ಮೇ 31ರಂದು ದೇವರಾಜು ಅವರು ಕೂಲಿ ಕೆಲಸ ಮುಗಿಸಿಕೊಂಡು ತೋಟದ ಮಾಲೀಕರಿಂದ ಹಣ ಪಡೆದು ಮನೆಗೆ ಮರಳುತ್ತಿದ್ದ ವೇಳೆ, ವೆಂಕಟೇಶ್ ಶೆಟ್ಟಿ ಅಡ್ಡಗಟ್ಟಿ, ನನ್ನ ವಿರುದ್ಧ ದೂರು ನೀಡಲು ನೀನೇ ಪ್ರಚೋದನೆ ನೀಡಿದ್ದೀಯಾ ಎಂದು ಪ್ರಶ್ನಿಸಿ ಏಕಾಏಕಿ ಹಲ್ಲೆ ನಡೆಸಿದ್ದಲ್ಲದೆ, ಜಾತಿ ನಿಂದ ನೆಯ ಪದಗಳನ್ನು ಬಳಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಹಲ್ಲೆ ವೇಳೆ ಕತ್ತಿಯಿಂದ ಕಾಲಿಗೆ ಬಲವಾಗಿ ಕಡಿದ ಪರಿಣಾಮ ದೇವರಾಜು ಅವರ ಕಾಲಿನ ಮೂಳೆ ಮುರಿದಿದ್ದು, ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

**ಮನೆಗೆ ಬೆಂಕಿ ಹಚ್ಚಿ ದೌರ್ಜನ್ಯ**

ಹಲ್ಲೆ ನಡೆದ ಮರುದಿನವಾದ ಜೂ.1ರ ರಾತ್ರಿ ದೇವರಾಜು ಅವರ ಮನೆಗೆ ಬೆಂಕಿ ಹಚ್ಚಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಪಿಕಪ್ ವಾಹನ ಖರೀದಿಸುವ ಉದ್ದೇಶದಿಂದ ಮನೆಯಲ್ಲಿ ಸಂಗ್ರಹಿಸಿದ್ದ ಸುಮಾರು 1.5 ಲಕ್ಷ ನಗದು, ಚೆಕ್ ಬುಕ್ ಹಾಗು ಇತರೆ ದಾಖಲೆಗಳು ಬೆಂಕಿಗೆ ಆಹುತಿಯಾಗಿವೆ ಎಂದು ದೇವರಾಜು ಅವರ ಪುತ್ರ ಮನೋಹರ್ ಅವರು ದೂರಿದ್ದಾರೆ.

**ದಲಿತ ಸಂಘಟನೆಗಳ ಆಕ್ರೋಶ**

ಘಟನೆ ತಿಳಿಯುತ್ತಿದ್ದಂತೆ ದಲಿತ ಸಂಘಟನೆಗಳ ಮುಖಂಡರು ಹಾಗು ಗ್ರಾಮಸ್ಥರು ಯಸಳೂರು ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಕುಟುಂಬದ ಮೇಲೆ ನಿರಂತರ ದೌರ್ಜನ್ಯ ಎಸಗಿರುವ ಆರೋಪಿಯ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಸೇರಿ ವಿವಿಧ ಕಾನೂನುಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

## ಉಕ್ರೇನ್ ಮೇಲೆ ರಷ್ಯಾ ದಾಳಿ: 21 ಮಂದಿ ಸಾವು

• ಪ್ರಜೋದಯ ವರದಿ

**ಕೀವ್:** ರಾಜಧಾನಿ ಕೀವ್ ಹಾಗೂ ಇತರ ನಗರಗಳ ಮೇಲೆ ರಷ್ಯಾ ರಾತ್ರಿಯಿಡೀ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಯಲ್ಲಿ 21 ನಾಗರಿಕರು ಮೃತರಾಗಿದ್ದು, ನೂರಾರು ಜನರು ಗಾಯಗೊಂಡಿದ್ದಾರೆಂದು ಉಕ್ರೇನ್ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಕೆಲವರು ವಸತಿ ಸಮುಚ್ಚಯಗಳ ಅವಶೇಷಗಳಡಿ ಸಿಲುಕಿದ್ದಾರೆ. ಕೇಂದ್ರ ಉಕ್ರೇನ್ ನಗರವಾದ ಡಿನಿಪ್ರೊದಲ್ಲಿ ಅವಶೇಷಗಳ ಅಡಿಯಿಂದ ಎಂಟು ವರ್ಷದ ಮಗು, ತಾಯಿ ಹಾಗೂ ಮೂರು ವರ್ಷದ ಮಗುವೊಂದರ ದೇಹವನ್ನು ಸಿಬ್ಬಂದಿ ಹೊರತೆಗೆದಿದ್ದಾರೆಂದು ಮಾಹಿತಿ ನಿಡಿದ್ದಾರೆ.

ಕ್ಷಿಪಣಿಗಳು ಮತ್ತು ಖಂಡಾಂತರ ಕ್ಷಿಪಣಿ ದಾಳಿಯಿಂದ ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳದಿದ್ದರೆ ರಷ್ಯಾ ದಾಳಿಯು ಮುಂದುವರಿಯಲಿದೆ ಎಂಬ ಸ್ಪಷ್ಟ ಸಂದೇಶ ಇದಾಗಿದೆ ಎಂದು ಪ್ರತಿಕ್ರಿಯಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಅಮೇರಿಕಾ ಮತ್ತು ಯುರೋಪ್ ರಾಷ್ಟ್ರಗಳಿಂದ ಹೆಚ್ಚಿನ ಬೆಂಬಲವನ್ನು ಕೋರಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK